ಜನಪ್ರಿಯ ಕಲಾಮಾಲಿಕೆ

ದೃಶ್ಯಕಲೆಗಳ ಗುಣಗ್ರಹಣ

ಡಾ|| ಅ. ಲ. ನರಸಿಂಹನ್

ಕರ್ನಾಟಕ ಲಲಿತಕಲಾ ಅಕಾಡೆಮಿ

ದೃಶ್ಯಕಲೆಗಳ ಗುಣಗ್ರಹಣ

ಡಾ|| ಅ. ಲ. ನರಸಿಂಹನ್

ಕರ್ನಾಟಕ ಲಲಿತಕಲಾ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು-560 002

DRUSYAKALEGALA GUNAGRAHANA

by Dr. A. L. Narasimhan

Published by K. Mukundan, Registrar
Karnataka Lalithakala Academy
Nrupatunga Road, Bangalore-560 002

First Impression : 1995

ಬೆಲೆ : ರೂ. 5-00

ಮುಖಚಿತ್ರ : ಎಸ್. ಜಿ. ವಾಸುದೇವ್

ಸಂಪಾದಕರು : **ಚಿ. ಸು. ಕೃಷ್ಣಸೆಟ್ಟಿ**

ಮುದ್ರಣ
ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ: 6618752, 6613123

ಒಂದು ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಇದುವರೆಗೆ ಕಲೆ ಮತ್ತು ಕಲಾವಿದರಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದೆ. ಪ್ರಸ್ತುತ ಅಕಾಡೆಮಿಯು ಜನಪ್ರಿಯ ಕಲಾ ಮಾಲಿಕೆಯಡಿಯಲ್ಲಿ ಸುಲಭ ದರದಲ್ಲಿ ಜನಸಾಮಾನ್ಯರಿಗೂ ಕಲೆಯು ಅರ್ಥವಾಗಲಿ ಎಂಬ ಉದ್ದೇಶದಿಂದ ದೃಶ್ಯಕಲೆ, ಕಲೆಯ ರಸಸ್ವಾದನೆ, ಕಲಾ ಪಂಥಗಳು ಈ ವಿಷಯವಾಗಿ ಕಿರು ಪುಸ್ತಕಗಳನ್ನು ಹೊರತರುತ್ತಿದೆ.

ಈ ಮಾಲಿಕೆಯ ಪುಸ್ತಕಗಳನ್ನು ಓದುವುದರಿಂದ ಜನಸಾಮಾನ್ಯರಲ್ಲಿ ಕಲಾ ಇತಿಹಾಸವನ್ನು ಪರಿಚಯಿಸುತ್ತಾ ಕಲಾಕೃತಿಯನ್ನು ನೋಡಿ, ಗ್ರಹಿಸಿ, ರಸಸ್ವಾದನೆ ಮಾಡಿ ಗುಣ ಮೌಲ್ಯಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿ ಉತ್ತಮ ಗುಣ ಮೌಲ್ಯವುಳ್ಳ ಕಲಾಕೃತಿಯನ್ನು ಸಂಗ್ರಹಿಸುವಲ್ಲಿ ಆಸಕ್ತಿ ಮೂಡುತ್ತದೆಯೆಂಬ ಆಶಯ ನಮ್ಮದಾಗಿದೆ.

ಈ ಮಾಲಿಕೆಯಲ್ಲಿ ಪುಸ್ತಕಗಳನ್ನು ಚಿತ್ರಯಾತ್ರೆಯ ಸಂದರ್ಭದಲ್ಲಿ ಹೊರತರುತ್ತಿರುವುದು ಔಚಿತ್ಯಪೂರ್ಣವಾಗಿದೆ. ಚಿತ್ರಯಾತ್ರೆಯು ನಾಡಿನಾದ್ಯಂತ ಸಂಚರಿಸುವಾಗ ಎಲ್ಲಾ ಪುಸ್ತಕಗಳು ನಾಡಿನ ಮೂಲೆ ಮೂಲೆಗೂ ತಲುಪಬೇಕೆಂಬುದು ನಮ್ಮ ಉದ್ದೇಶವಾಗಿದೆ. ಈ ಮಾಲಿಕೆಯಲ್ಲಿ ಬರೆದಿರುವ ಲೇಖಕರೆಲ್ಲರೂ ಸಂಬಂಧಪಟ್ಟ ವಿಷಯದಲ್ಲಿ ಪರಿಣತರೇ ಆಗಿದ್ದಾರೆ. ನಮಗೆ ಅತ್ಯಂತ ಕಡಿಮೆ ಅವಧಿಯಲ್ಲಿ ಈ ಕಿರುಹೊತ್ತಿಗೆಗಳನ್ನು ಬರೆದುಕೊಟ್ಟ ಕಲಾ ಲೇಖಕರಿಗೆ ಆಭಾರಿಯಾಗಿದ್ದೇವೆ. ನಮ್ಮ ಈ ಪ್ರಯತ್ನವನ್ನು ಕಲಾವಿದರೂ, ಕಲಾಸಕ್ತರೂ ತುಂಬು ಹೃದಯದಿಂದ ಸ್ವಾಗತಿಸಿ ಪ್ರೋತ್ಸಾಹಿಸುತ್ತಾರೆಂದು ನಂಬಿದ್ದೇವೆ.

ಸಿ. ಚಂದ್ರಶೇಖರ

ಅಧ್ಯಕ್ಷರು

ದೃಶ್ಯಕಲೆಗಳ ಗುಣಗ್ರಹಣ

ಮಾನವನು ಹಲವಾರು ಶತಮಾನಗಳಿಂದ ಕಲಾಕೃತಿಗಳನ್ನು ರಚಿಸುತ್ತ ಬಂದಿದ್ದಾನೆ. ವಿವಿಧ ಕಾಲಗಳಲ್ಲಿನ ಜನರು ಆಯಾಕಾಲದ ಹಾಗೂ ಆ ಹಿಂದಿನ ಕಲಾಕೃತಿಗಳನ್ನು ನೋಡಿ ಸಂತೋಷ ಹಾಗೂ ತೃಪ್ತಿಗಳು ಸೇರಿದಂತೆ ವೈವಿಧ್ಯಮಯ ಅನುಭವಗಳನ್ನು ಪಡೆದಿದ್ದಾರೆ. ಈ ಕಲಾಕೃತಿಗಳನ್ನು ನೋಡುವ ಪ್ರಕ್ರಿಯೆಗೆ ಅಭ್ಯಾಸ ತುಂಬ ಮುಖ್ಯವಾದುದು. ಚಿತ್ರಕಲೆಯದೇ ಆದ 'ವ್ಯಾಕರಣ'ವನ್ನು ತಿಳಿದುಕೊಳ್ಳುವುದರೊಂದಿಗೆ ತಮ್ಮಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯಗಳನ್ನೂ ನೋಡುಗರು ಬಳಸಬೇಕಾಗುತ್ತದೆ. ಮೇಲ್ನೋಟಕ್ಕೆ ಚಿತ್ರ ಅಥವಾ ಶಿಲ್ಪವೊಂದು ಭೌತಿಕ ವಸ್ತುವಾಗಿ ಕಂಡುಬರುತ್ತದೆ. ಅವುಗಳನ್ನು ನಾವು ನಮ್ಮ ಇಂದ್ರಿಯಗಳ ಮೂಲಕ ಗ್ರಹಿಸುತ್ತೇವೆ. ದೃಶ್ಯ ಭಾಷೆಯನ್ನು ಕುರಿತು ನಮಗಿರುವ ಅನುಭವ, ಧೋರಣೆಗಳನ್ನು ಅನುಸರಿಸಿ ಅದು ನಮಗೆ ವಿಭಿನ್ನವಾಗಿ ಕಂಡುಬರುತ್ತದೆ. ಅಂತೆಯೇ ಸಹೃದಯ, ವಿಮರ್ಶಕ ಹಾಗೂ ಕೃತಿಯನ್ನು ಕೊಳ್ಳುವ ಗ್ರಾಹಕರು ತಮ್ಮದೇ ಆದ ದೃಷ್ಟಿಯಿಂದ ಕಲಾಕೃತಿಯ ಗುಣಗ್ರಹಣ ಮಾಡುತ್ತಾರೆ.

ತೀರಾ ಸಾಮಾನ್ಯ ಮನುಷ್ಯ ಕೃತಿ 'ಚೆನ್ನಾಗಿದೆ' ಎಂದೋ 'ಚೆನ್ನಾಗಿಲ್ಲ' ಎಂದೋ ಪ್ರತಿಕ್ರಿಯಿಸಿ ಸುಮ್ಮನಾಗಬಹುದು. ಚಿತ್ರಕಲೆಗೆ ಸಿದ್ಧಗೊಂಡ ಸಹೃದಯನಾದವನು ಕಲಾಕೃತಿಯ ರಸಾಸ್ವಾದನೆ ಮಾಡಬಹುದು. ವಿಮರ್ಶಕ ಕೃತಿಯನ್ನು ಒರೆಗೆ ಹಚ್ಚಿ ಅದರ ಮೌಲ್ಯಮಾಪನ ಮಾಡಬಹುದು. ಗ್ರಾಹಕ ಇವೆಲ್ಲವನ್ನು ಲಕ್ಷ್ಯದಲ್ಲಿರಿಸಿಕೊಂಡೂ ವ್ಯಾಪಾರಿ ದೃಷ್ಟಿಯಿಂದ ನೋಡಬಹುದು. ಹೀಗೆ ಒಂದು ಕಲಾಕೃತಿ ಹಲವಾರು ರೀತಿಯಲ್ಲಿ ಪರೀಕ್ಷೆಗೆ ಒಳಪಟ್ಟು 'ಕಾಲನ ಆಘಾತ'ವನ್ನು ತಾಳಿ ಉಳಿಯಬೇಕಾಗುತ್ತದೆ.

ಲಲಿತಕಲೆಗಳಲ್ಲಿ ಚಿತ್ರ, ಶಿಲ್ಪ, ವಾಸ್ತು ಶಿಲ್ಪಗಳು ಒಂದು ಗುಂಪಿಗೆ ಬರುತ್ತವೆ. ಸಾಮಾನ್ಯವಾಗಿ ಇವುಗಳನ್ನು ನಾವು ದೃಶ್ಯಕಲೆಗಳು ಎಂದು ಕರೆಯುತ್ತೇವೆ. ಚಿತ್ರ ಉದ್ದ ಮತ್ತು ಅಗಲವೆಂಬ ದ್ವಿಪರಿಮಾಣದಲ್ಲಿದ್ದರೆ, ಶಿಲ್ಪಕ್ಕೆ ದಪ್ಪವೂ ಇದ್ದು ತ್ರಿಪರಿಮಾಣವೆನಿಸುತ್ತದೆ. ತಳಹದಿಯಿಂದ ಸ್ವಲ್ಪ ಉಬ್ಬಿರುವ ಶಿಲ್ಪ ಫಲಕಗಳು ಒಂದಾದರೆ ಎಲ್ಲಾ ಬದಿಯಿಂದಲೂ ಕೆತ್ತಿರುವ ಬಿಡಿ ಶಿಲ್ಪಗಳು ಇನ್ನೊಂದು ಬಗೆಯವು. ಮನೆ, ಅರಮನೆ, ಕಚೇರಿ ದೇವಾಲಯ ಇತ್ಯಾದಿ ಕಟ್ಟಡಗಳೆಲ್ಲವೂ ವಾಸ್ತುಶಿಲ್ಪವೆಂದೆನಿಸಿಕೊಳ್ಳುತ್ತವೆ.

ಸಹೃದಯ

ಸಾಹಿತ್ಯ, ಕಲಾ ಲೋಕದಲ್ಲಿ ಸಹೃದಯನಿಗೆ ಒಂದು ವಿಶೇಷವಾದ ಸ್ಥಾನವನ್ನು ಕಲ್ಪಿಸಲಾಗಿದೆ. 'ಸಹೃದಯ'ನೆಂದರೆ ಕವಿ ಅಥವಾ ಕಲಾಕಾರನಿಗೆ ಸಮಾನ ಹೃದಯ ಉಳ್ಳವನು ಎಂಬ ಅರ್ಥವಿದೆ. ಕೃತಿ ರಚನೆಯ ಕಾಲದಲ್ಲಿ ಕೃತಿಕಾರ ಅನುಭವಿಸಿದ ರಸಾನುಭವಗಳನ್ನು ರಸಿಕನಾದ ಸಹೃದಯನೂ ಕೃತಿಯ ದರ್ಶನದಿಂದ ಪಡೆಯುತ್ತಾನೆ. ಕೃತಿಯಲ್ಲಿ ದೋಷಗಳು ಇರಬಹುದಾದರೂ ಅವುಗಳನ್ನು ಗೌಣವಾಗಿರಿಸಿ ಕೃತಿಯ ಗುಣಗ್ರಹಣ ಅಥವ ರಸಾಸ್ವಾದನೆಯನ್ನು (art appreciation) ಮಾಡುತ್ತಾನೆ. ಕಲಾಕೃತಿಗಳನ್ನು ಹೆಚ್ಚಾಗಿ ನೋಡಿ ನಮ್ಮ ಸೌಂದರ್ಯ ಪ್ರಜ್ಞೆಯನ್ನು ಬೆಳೆಸಿಕೊಂಡಷ್ಟೂ ನಿಜವಾದ ರಸಾಸ್ವಾದನೆ ಸುಲಭವಾಗುತ್ತದೆ. ರಸಾಸ್ವಾದನೆ ಹೆಚ್ಚಾದಷ್ಟೂ ಆ ಕಲಾಕೃತಿ ನಮಗೆ ಹೆಚ್ಚು ಆಪ್ಯಾಯಮಾನವಾಗುತ್ತದೆ, ಹತ್ತಿರವಾಗುತ್ತದೆ. ಕೃತಿಯನ್ನು ಅರ್ಥಮಾಡಿಕೊಳ್ಳಲು ಅಥವಾ ಅನುಭವಿಸಲು ಸಾಧ್ಯವಾಗುತ್ತದೆ. ಆ ಕೃತಿ ಹೆಚ್ಚು ಕಾಲ ನೆನಪಿನಲ್ಲಿ ಉಳಿಯುವಂತಾಗುತ್ತದೆ. ಈ ಮನೋಭಾವದಿಂದ ಕಲಾಕೃತಿಯ ಮುಂದೆ ನಿಂತಾಗ ನಮಗೆ ಕೆಲವು ಪ್ರಶ್ನೆಗಳು ಎದುರಾಗುತ್ತವೆ. ಕಲಾಕೃತಿಯ ಮಂದೆ ನಿಂತಾಗ ಅದು:

1. ಯಾವಾಗ? ಯಾರಿಂದ? ಎಲ್ಲಿ ರಚಿತವಾಯಿತು?
2. ಕೃತಿಯನ್ನು ಹೇಗೆ ಬಳಸಿಕೊಳ್ಳಲಾಗುತ್ತಿತ್ತು?
3. ಕೃತಿಯಲ್ಲಿ ಗೋಚರವಾಗುವ ಸತ್ಯಗಳು (Visual facts) ಯಾವುವು?
4. ರಚನೆಯ ತಂತ್ರ (Technique) ಹಾಗೂ ವಸ್ತುಗಳು ಯಾವುವು?
5 ಕೃತಿಯ ಸಂಯೋಜನೆ (Composition) ಹೇಗಿದೆ?
6. ದೃಶ್ಯಮಾಧ್ಯಮದ ತಂತ್ರಗಳನ್ನು ಹೇಗೆ ಬಳಸಿದೆ? (What visual devices are used)
7. ಕೃತಿಯು ಒಟ್ಟು ಯಾವ ಪ್ರತಿಮೆಗಳನ್ನು ತೋರಿಸುತ್ತದೆ? (What images does the art work show)
8. ಯಾವ ಭಾವನೆಗಳನ್ನು ಕೃತಿಯಲ್ಲಿ ಮೂಡಿಸಿದೆ?
9. ಯಾವ ಸಂಕೇತಗಳನ್ನು ಕೃತಿಯಲ್ಲಿ ಇರಿಸಿದೆ?
10. ಸಾಮಾನ್ಯವಾಗಿ ನೋಡಲು, ಇಲ್ಲವೆ ವಿವರಣಾತ್ಮಕವಾಗಿ ನೋಡಲು ಕಲಾಕೃತಿ ಹೇಗಿದೆ?
11. ಕಲಾಕೃತಿಯು ಒಂದು ಸಂಸ್ಕೃತಿ ಅಥವಾ ಆ ಕೃತಿಯನ್ನು ರಚಿಸಿದ ಕಲಾವಿದನನ್ನು ಹೇಗೆ ಪ್ರತಿಬಿಂಬಿಸುತ್ತದೆ?

12. ಕಲಾಕೃತಿ ಯಾವ ಉದ್ದೇಶವನ್ನು ಈಡೇರಿಸುತ್ತಿದೆ?

13. ಈ ಕೃತಿ ಇವುಗಳ ಜೊತೆಯ ಕೃತಿಗಳಿಗಿಂತ ಭಿನ್ನವಾಗಿ ಯಾವ ಸ್ವಂತ ಅಸ್ತಿತ್ವವನ್ನು ಪಡೆದುಕೊಂಡಿದೆ?

ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದೇ ಕಲೆಯ ರಸಾಸ್ವಾದನೆ ಅಥವ ಗುಣಗ್ರಹಣ ಎನ್ನಬಹುದು.

ಭಿತ್ತಿ ಫಲಕ

ಚಿತ್ರ ಸಾಮಾನ್ಯವಾಗಿ ಉದ್ದ ಮತ್ತು ಅಗಲಗಳಾದ ದ್ವಿಪರಿಮಾಣದಲ್ಲಿ ಸಪಾಟಾದ ವಸ್ತುವಿನ ಮೇಲೆ (ಫಲಕ) ರಚಿಸುವಂತಹದು. ತೀರಾ ಮೊದಲಿಗೆ ಆದಿಮಾನವ ತಾನು ವಾಸಿಸುತ್ತಿದ್ದ ಗುಹಾಲಯದ ಒಂದು ಬದಿಯಲ್ಲಿಯೇ ಗುಹೆಯ ಭಿತ್ತಿ ಇರುವಂತೆಯೇ ಅದರ ಮೇಲೆ ಚಿತ್ರ ಬಿಡಿಸುತ್ತಿದ್ದ. ಮನುಷ್ಯ ನಾಗರಿಕನಾದ ಮೇಲೆ ಬಂಡೆಗಳನ್ನು ಕೊರೆದು ಗುಹಾಲಯವನ್ನು ರೂಪಿಸಿ ಅದರ ಸಮತಟ್ಟಾದ ಭಿತ್ತಿಯ ಮೇಲೆ ಮಣ್ಣು, ಗಾರೆ ಇತ್ಯಾದಿಗಳನ್ನು ಮೆತ್ತಿ ಅವುಗಳ ಮೇಲೆ ಚಿತ್ರ ರಚಿಸತೊಡಗಿದ. ಮನೆ, ಅರಮನೆ, ದೇವಾಲಯ, ಮಂಟಪ ಇತ್ಯಾದಿಗಳನ್ನು ಕಲ್ಲು, ಇಟ್ಟಿಗೆಗಳಿಂದ ಕಟ್ಟತೊಡಗಿದ ಮೇಲೆ ಭಿತ್ತಿಯನ್ನು ಚಿತ್ರಕಲೆಗೆ ಅನುಕೂಲವಾಗುವಂತೆ ವಿಶೇಷವಾಗಿ ಅಣಿಮಾಡಿಕೊಳ್ಳುತ್ತಿದ್ದ. ಮುಂದೆ ಹತ್ತಿ ಹಾಗೂ ರೇಷ್ಮೆಯಿಂದ ಬಟ್ಟೆಗಳನ್ನು ತಯಾರಿಸುವುದು ಕಲಿತ. ಅವುಗಳ ಮೇಲೆ ಹಾಗೆಯೇ ಇಲ್ಲವೆ ಗೋಡೆಗೆ ಹಚ್ಚುವಂತೆ ತಳಹದಿಗೆ ಲೇಪನ ಮಾಡಿ ಅವುಗಳ ಮೇಲೆ ಚಿತ್ರ ಬರೆಯತೊಡಗಿದ. ಇವುಗಳ ಆಧುನಿಕ ರೂಪವಾದ 'ಕ್ಯಾನ್ವಾಸ್'ನ್ನು ಕಲಾವಿದನೇ ಸ್ವತಃ ತಯಾರಿಸಿಕೊಳ್ಳಬಹುದು ಇಲ್ಲವೆ ಪೇಟೆಯಲ್ಲಿ ಸಿದ್ಧರೂಪದಲ್ಲಿ ದೊರೆಯುವುದನ್ನು ಬಳಸಿಕೊಳ್ಳಬಹುದು. ತೈಲವರ್ಣ ಹಾಗೂ ಅಕ್ರಿಲಿಕ್ ವರ್ಣಚಿತ್ರ ರಚನೆಗೆ ಕ್ಯಾನ್ವಾಸ್‌ಗಳನ್ನು ಬಳಸಿಕೊಳ್ಳುತ್ತಾರೆ.

ಜಲವರ್ಣ ಚಿತ್ರಗಳು ಕೈಕಾಗದದ ಮೇಲೆ ರಚಿಸುವಂತಹದು. ಹದಿನೈದನೆಯ ಶತಮಾನದಿಂದ ಈಚೆಗೆ ಕಾಗದದ ಬಳಕೆ ಅಧಿಕವಾಗಿದ್ದು ಚಿತ್ರರಚನೆಗೆ ಯೋಗ್ಯವಾದ ಹಲವಾರು ನಮೂನೆಯ ಕಾಗದಗಳು ದೊರೆಯುತ್ತವೆ. ಇವಲ್ಲದೆ ಗಾಜು, ಮರದ ಹಲಗೆ, ದಂತ ಇತ್ಯಾದಿಗಳನ್ನು ಫಲಕಗಳಾಗಿ ಬಳಸಿಕೊಳ್ಳುವುದುಂಟು.

ಬಣ್ಣ

ಚಿತ್ರಕಲೆಯಲ್ಲಿ ಮುಖ್ಯವಾದ ಅಂಶವೆಂದರೆ ಬಣ್ಣಗಳು. ನಮಗೆ ತಿಳಿದಿರುವಂತೆ ನೀಲಿ, ಕೆಂಪು ಹಾಗೂ ಹಳದಿ ಬಣ್ಣಗಳು ಮೂಲವರ್ಣಗಳು. ಇವುಗಳಲ್ಲಿ ಎರಡು ಬಣ್ಣಗಳ ಮಿಶ್ರಣದಿಂದ ಇನ್ನೂ ಮೂರು ಮಿಶ್ರವರ್ಣಗಳನ್ನು ತಯಾರಿಸಿಕೊಳ್ಳಬಹುದು.

ಅವೆಂದರೆ ನೀಲಿ ಮತ್ತು ಕೆಂಪಿನಿಂದ ನೇರಳೆ, ಕೆಂಪು ಮತ್ತು ಹಳದಿಯಿಂದ ಕಿತ್ತಳೆ ಮತ್ತು ನೀಲಿ ಮತ್ತು ಹಳದಿಯಿಂದ ಹಸಿರು ಬಣ್ಣಗಳು ಉತ್ಪತ್ತಿಯಾಗುತ್ತವೆ. ಮಿಶ್ರವರ್ಣಗಳನ್ನು ಮತ್ತೆ ಮಿಶ್ರ ಮಾಡುವುದರಿಂದ ಕಪ್ಪು ಬಣ್ಣವೂ ಮೂಲ ಹಾಗೂ ಮಿಶ್ರ ವರ್ಣಗಳಲ್ಲೇ ಪರಸ್ಪರ ಏಕ ಅಥವ ಅನೇಕ ಬಣ್ಣಗಳನ್ನು ಹಲವಾರು ಪ್ರಮಾಣದಲ್ಲಿ ಮಿಶ್ರ ಮಾಡುತ್ತಾ ಅಗಣಿತ ವರ್ಣಛಾಯೆ(ಹ್ಯೂ)ಗಳನ್ನು ಪಡೆಯಬಹುದು.

ಇವುಗಳಲ್ಲಿ ನೀಲಿ, ನೇರಳೆ, ಹಸಿರು ಬಣ್ಣಗಳನ್ನು ತಂಪು(ಕೂಲ್) ವರ್ಣಗಳೆಂದೂ, ಕೆಂಪು, ಕಿತ್ತಳೆ, ಹಳದಿ ಬಣ್ಣಗಳನ್ನು ಉಷ್ಣ(ವಾರಮ್) ವರ್ಣಗಳೆಂದೂ ಕರೆಯುತ್ತಾರೆ. ಈ ರೀತಿ ಹೇಳಲು ಕಾರಣ ಈ ವರ್ಣಗಳು ಮನಸ್ಸಿನ ಮೇಲೆ ಬೀರುವ ಪರಿಣಾಮ. ಉದಾಹರಣೆಗೆ ರಕ್ತವರ್ಣವಾದ ಕೆಂಪು ಅಪಾಯ, ಭಯ, ಹಿಂಸೆ ಇತ್ಯಾದಿಗಳನ್ನು ಸೂಚಿಸುತ್ತದೆ. ಹಸಿರು ಫಲಸಮೃದ್ಧಿಯನ್ನು ಸೂಚಿಸುತ್ತದೆ. ದಟ್ಟವಾದ ಕೆಂಪು ವರ್ಣ ಕಣ್ಣಿಗೆ ಅಹಿತ ಎನ್ನಿಸಿದರೆ ಹಸಿರು ತಂಪಾಗಿ ಕಾಣಿಸುತ್ತದೆ. ಇದಲ್ಲದೆ ಸಾಮಾಜಿಕವಾಗಿ, ಸಾರ್ವತ್ರಿಕವಾಗಿ ಬಣ್ಣಗಳಿಗೆ ಕೆಲವು ಸಂಕೇತಗಳನ್ನು ಹೊಂದಿಸಲಾಗಿದೆ. ಬಿಳಿ ಬಣ್ಣ ಶಾಂತಿಯನ್ನು, ಕೇಸರಿ ತ್ಯಾಗವನ್ನು, ಕಪ್ಪು ದುಃಖ ಹೀಗೆ ಬಣ್ಣಗಳು ಸಾಮಾನ್ಯವಾಗಿ ಸ್ಫುರಿಸುವ ಕೆಲವು ಭಾವನೆಗಳಿಗೆ ಪೂರಕವಾಗಿ ಕಂಡುಬರುತ್ತದೆ. ಚಿತ್ರಫಲಕದಲ್ಲಿ ಇರಿಸಿದ ಬಣ್ಣಗಳಲ್ಲೂ ಕೆಂಪು ಇತ್ಯಾದಿ ಉಷ್ಣ ವರ್ಣಗಳು ಹತ್ತಿರಕ್ಕೆ ಎದ್ದು ಬಂದಂತೆಯೂ ಹಸಿರು, ನೀಲಿ ಇತ್ಯಾದಿ ತಂಪು ಬಣ್ಣಗಳು ನಮ್ಮಿಂದ ದೂರದಲ್ಲಿ ಇರುವಂತೆಯೂ ಭಾಸವಾಗುತ್ತದೆ.

ರಸಗ್ರಹಣದ ದೃಷ್ಟಿಯಿಂದ ವರ್ಣಗಳು ನಮ್ಮ ಭಾವನೆಗಳನ್ನು ಉತ್ತೇಜಿಸುವ ಕ್ರಿಯೆಗೆ ಪೋಷಕವಾಗುವುದು ಒಂದಾದರೆ, ಬಣ್ಣಗಳ ಆಯ್ಕೆ, ನಿಯಂತ್ರಣ, ಹಚ್ಚುವಿಕೆಗಳಲ್ಲಿ ಕಲಾವಿದನಿಗೆ ಇರುವ ಹಿಡಿತ ಹಾಗೂ ನಿರ್ವಹಣಾ ಕೌಶಲ್ಯಗಳು ಇನ್ನೊಂದು ಮುಖ್ಯ ಅಂಶವಾಗುತ್ತದೆ. ತೈಲವರ್ಣಗಳು ಅಪಾರದರ್ಶಕವಾಗಿದ್ದರೆ, ಜಲವರ್ಣ ಪಾರದರ್ಶಕವಾಗಿದ್ದು ತೀರ ತೆಳುವಾದ ಸೂಕ್ಷ್ಮವಾದ ಕೃತಿಗಳ ರಚನೆಗೆ ಸೂಕ್ತ. ಅದೇ ಅಕ್ರಿಲಿಕ್ ವರ್ಣಗಳು ಜಲವರ್ಣದ ಅನುಭವವನ್ನು, ತೈಲವರ್ಣದ ಕೆಲವು ಗುಣಗಳನ್ನು ಹೊಂದಿರುವಂತಹದು. ಎಂದರೆ ಕಲಾವಿದ ವರ್ಣ ಮಾಧ್ಯಮವನ್ನು ಬಳಸಿಕೊಂಡಿರುವ ರೀತಿ ಮಾಧ್ಯಮದ ಮೇಲೆ ಆತನಿಗಿರುವ ಹಿಡಿತ, ಯಶಸ್ವಿಯಾಗಿ ದುಡಿಸಿಕೊಂಡಿರುವ ರೀತಿ, ಚಿತ್ರ ಫಲಕದಲ್ಲಿ ಅಕ್ಕಪಕ್ಕಗಳಲ್ಲಿ ಇರುವ ಆಕೃತಿಗಳಿಗೆ ಬಳಸಿರುವ ವರ್ಣ ವೈವಿಧ್ಯತೆ, ನೋಡಲು ಕಣ್ಣುಗಳಿಗೆ ಆಯಾಸವಾಗದಂತೆ ಹಿತಮಿತವಾಗಿರುವಿಕೆಗಳೆಲ್ಲವೂ ಆ ಒಂದು ಕೃತಿಯನ್ನು ವೀಕ್ಷಿಸಿ ಸೌಂದರ್ಯಾನುಭವವನ್ನು ಸವಿಯಲು ನೆರವಾಗುವಂತೆ ಮಾಡುತ್ತವೆ.

ಆಧುನಿಕ ಕಲೆಯಲ್ಲಿ ಬಣ್ಣ

ಆಧುನಿಕ ಚಿತ್ರಕಲೆಯಲ್ಲಿ ಬಣ್ಣಗಳ ಪಾತ್ರ ಪ್ರಮುಖವಾದುದು. ಕಳೆದ ಶತಮಾನದ ಅಂತ್ಯದಲ್ಲಿ ಯೂರೋಪಿನಲ್ಲಿ ಚಿತ್ರ ಕಲೆಯಲ್ಲಿ ಹೊಸ ಕ್ರಾಂತಿ ಆಯಿತು. ವಸ್ತುವಿನ ಮೇಲೆ ಪ್ರತಿಫಲಿಸುವ ನೆರಳು-ಬೆಳಕುಗಳ ಪರಿಣಾಮದಿಂದಾಗಿ ಆಯಾ ವಸ್ತುಗಳಲ್ಲಿ ಕಾಣಬರುವ ಬಣ್ಣಗಳ ಬಗ್ಗೆ ಕಲಾವಿದರು ಆಳವಾದ ಅಧ್ಯಯನ ಮಾಡಿ ಚಿತ್ರರಚಿಸ ತೊಡಗಿದರು. ಉದಾಹರಣೆಗೆ ಆಕಾಶದಲ್ಲಿ ತೇಲಾಡುವ ಮೋಡಗಳ ಮೇಲೆ, ಅನಂತವಾದ ಭೂದೃಶ್ಯದ ಮೇಲೆ ವಿವಿಧ ಕಾಲದಲ್ಲಿ, ಋತುಮಾನಗಳಲ್ಲಿ ಬೀಳುವ ಬಿಸಿಲು ಹಾಗೂ ಕ್ಷಣಕ್ಷಣಕ್ಕೆ ಬದಲಾಗುವ ಬೆಳಕಿನಿಂದಾಗಿ ಅವುಗಳ ಬಣ್ಣಗಳಲ್ಲಿ ಕಂಡುಬರುವ ವೈವಿಧ್ಯತೆಗಳನ್ನು ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಹಿಡಿದಿರಿಸಿದರು. ಮುಂದೆ ಕೃತಿ ರಚನೆಯಲ್ಲಿ ಇನ್ನಷ್ಟು ಬದಲಾವಣೆಗಳಾಯಿತಾದರೂ ಬಣ್ಣಗಳನ್ನು ವೈವಿಧ್ಯಮಯವಾಗಿ ಇರಿಸುವುದೇ ಪ್ರಮುಖ ಅಂಶವಾಯಿತು. ಆದುದರಿಂದ ಆಧುನಿಕ ಚಿತ್ರಗಳಲ್ಲಿ ಒಂದು ನಿಶ್ಚಿತವಾದ, ಗುರುತಿಸಬಹುದಾದ ಆಕಾರಗಳಿರುವಂತೆಯೇ, ಬಣ್ಣದ ಅಮೂರ್ತ ಹರಹುಗಳೂ ಪ್ರಧಾನವಾಗಿ ಕಂಡುಬರುತ್ತದೆ.

ಕುಂಚದ ಕೆಲಸ

ಮುಂದಿನದು ಫಲಕದ ಮೇಲೆ ಆಕೃತಿಯನ್ನು ಮೂಡಿಸುವ ಹಂತ. ಹೀಗೆ ಮೂಡಿಸಲು ಕೆಲವು ಸಾಧನಗಳು ಬೇಕು. ತೀರಾ ಮೊದಲಿಗೆ ಆದಿಮಾನವ ಗಿಡದ ಟೊಂಗೆಯ ಕಡ್ಡಿಯಿಂದಲೇ ಚಿತ್ರ ರಚಿಸುತ್ತಿದ್ದ. ನಂತರ ಪ್ರಾಣಿಯ ಕೂದಲಿನಿಂದ ರೂಪಿಸಿದ ಹಲವಾರು ಆಕಾರದ ಕುಂಚಗಳು ಬಳಕೆಗೆ ಬಂದವು. ಇದಲ್ಲದೆ ಕರಣೆಯ ಆಕಾರದ 'ಪ್ಯಾಲೆಟ್ ನೈಫ್'ಗಳು, ತುಂತುರಾಗಿ ಹನಿಸುವ 'ಸ್ಪ್ರೆಯರ್'ಗಳು ಸಹ ಆಕೃತಿಗಳನ್ನು ಮೂಡಿಸಲು ಸಾಧನಗಳಾಗಿವೆ. ಈ ಎಲ್ಲ ಸಾಧನಗಳಿಂದಾಗಿ ಬಣ್ಣವನ್ನು ಸಪಾಟಾಗಿ ವಿಶಾಲವಾದ ಹರಹಿನಲ್ಲಿ ಹಚ್ಚಲು ಇಲ್ಲವೆ ಸೂಕ್ಷ್ಮವಾಗಿ ಛಾಯಾಂಕನ ಮಾಡಲು ಸಾಧ್ಯವಾಗುತ್ತದೆ. ಕೆಲವೊಮ್ಮೆ ಆಧುನಿಕರು ಬಣ್ಣಗಳನ್ನು ನೇರವಾಗಿ ರಬಟೆಯಾಗಿ ಮೆತ್ತುವುದುಂಟು. ಮುಖ್ಯವಾಗಿ ಅಕ್ಷರಗಳನ್ನು ಬರೆಯುವುದಕ್ಕೂ ಚಿತ್ರ ಬರೆಯುವುದಕ್ಕೂ ಹೆಚ್ಚಿನ ಸಾಮ್ಯವಿದೆ. ಅಕ್ಷರ(ಲಿಪಿ) ಬರವಣಿಗೆಯಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಿರುವಂತೆ ಚಿತ್ರ ರಚನೆಯಲ್ಲೂ ಭಿನ್ನತೆಯಿರುತ್ತದೆ. ಸಾಂಪ್ರದಾಯಿಕ ಅಥವ ನೈಜಶೈಲಿಯ ಚಿತ್ರಗಳಲ್ಲಿ ಈ ಭಿನ್ನತೆ ಹೆಚ್ಚು ಕಾಣಬರುವುದಿಲ್ಲವಾದರೂ, ಆಧುನಿಕ ಕಲಾವಿದರಲ್ಲಿ ಪ್ರತಿಯೊಬ್ಬ ಕಲಾವಿದನೂ ತಾವು ಇನ್ನೊಬ್ಬ ಕಲಾವಿದನಿಂದ ಪ್ರತ್ಯೇಕವೆಂದು ತೋರ್ಪಡಿಸುವಲ್ಲಿ ಬಣ್ಣ ಹಚ್ಚುವ ಕ್ರಿಯೆಯೂ ಒಂದು ಮುಖ್ಯ ಅಂಶವಾಗುತ್ತದೆ. ಎಂದರೆ ಕುಂಚದ ಓಟ, ಒತ್ತು, ಬೀಸು, ರಭಸ ಇತ್ಯಾದಿಗಳೂ ಕೃತಿಯ ರಚನೆಯ ನಂತರವೂ ನೋಡುಗನಿಗೆ

ನಿಚ್ಚಳವಾಗಿ ಗೋಚರಿಸುತ್ತದೆ. ಇದು ಕಲಾವಿದನ ಮನಃಸ್ಥಿತಿಯನ್ನು ತೋರಿಸುತ್ತವೆ. ಮತ್ತೆ ನೋಡುಗನಲ್ಲಿಯೂ ಅದೇ ಭಾವನೆಯನ್ನು ಮೂಡಿಸುತ್ತದೆ. ಉದಾಹರಣೆಗೆ ತೀರ ನವಿರಾಗಿ ನಿರ್ವಹಣೆ ಮಾಡಿದ ಚಿತ್ರಗಳು ಮನಸ್ಸಿಗೆ ಮುದ ನೀಡಬಹುದು. ಅದೇ ಕಡುಪಾಗಿ ವರ್ಣಗಳನ್ನು ಮೆತ್ತಿ ನಿರ್ವಹಿಸಿದಲ್ಲಿ ಒರಟೊರಟಾಗಿ ಕಾಣಬಹುದು. ಪಾಶ್ಚಾತ್ಯ ಕಲಾವಿದರಾದ ವ್ಯಾನ್‌ಗಾಗ್, ಎಡ್ವರ್ಡ್ ಮ್ಯುಂಖ್‌ರಂತಹ ಕಲಾವಿದರ ಕೃತಿಗಳಲ್ಲಿ ಅವರ ಒಳತೋಟಿಗಳು, ನೋವುಗಳು, ಆತಂಕಗಳು ಅವರ ಕುಂಚದ ನಿರ್ವಹಣೆಯಲ್ಲಿ ಕಂಡುಬರುತ್ತದೆಯಲ್ಲದೆ ನೋಡುಗರೂ ಅದೇ ಭಾವನೆಗಳಿಗೆ ತಲಪುವಷ್ಟು ಪರಿಣಾಮಕಾರಿಯಾಗಿ ಚಿತ್ರಿತವಾಗಿವೆ. ವಾನ್‌ಗಾಗ್‌ನ ಕೃತಿಗಳಿಗೆ ಕೋಟ್ಯಾಂತರ ರೂಪಾಯಿಗಳ ಮೌಲ್ಯವಿರುವುದಕ್ಕೆ ಕುಂಚದ ನಿರ್ವಹಣೆಯೂ ಒಂದು ಮುಖ್ಯ ಕಾರಣ ಎಂದೆನ್ನಲಾಗಿದೆ.

ಆದಿಮ ಚಿತ್ರಗಳು

ರಸಾಸ್ವಾದನೆಗೆ ನಾವು ನೋಡುತ್ತಿರುವ ಕೃತಿ ಯಾವ ಕಾಲದ್ದು; ಯಾವ ಶೈಲಿಯದು ಎಂಬುದೂ ಮುಖ್ಯ. ಅದಕ್ಕೆ ಕಲಾ ಚರಿತ್ರೆಯ ಸಂಕ್ಷಿಪ್ತ ಇತಿಹಾಸದ ಅರಿವು ಇರಬೇಕಾಗುತ್ತದೆ. ಇದರೊಂದಿಗೆ ಆಯಾಕಾಲದ ಕಲಾಕೃತಿಗಳ ಉದ್ದೇಶಗಳನ್ನೂ ಗಮನಿಸಬಹುದು. ಸುಮಾರು ಕ್ರಿ.ಪೂ. 10,000ದಿಂದ ಕ್ರಿಸ್ತ ಶಕೆಯ ಆರಂಭ ಕಾಲದವರೆವಿಗೆ ಆದಿಮಾನವ ಗುಹಾಲಯಗಳಲ್ಲಿ, ಇಲ್ಲವೆ ಉಪಕರಣಗಳ ಮೇಲೆ ರಚಿಸಿದ ಚಿತ್ರಗಳಿಗೆ ಇತಿಹಾಸಪೂರ್ವ ಚಿತ್ರಗಳೆಂದು ಕರೆಯುತ್ತಾರೆ. ಪ್ರಪಂಚದಾದ್ಯಂತ ಕಂಡುಬರುವ ಈ ಬಗೆಯ ಚಿತ್ರಗಳಲ್ಲಿ ಬೇಟೆ ಹಾಗೂ ಕುಣಿತಗಳೇ ಪ್ರಮುಖ ವಿಷಯಗಳಾಗಿ ಕಂಡುಬರುತ್ತವೆ. ತನ್ನ ಆಹಾರವಾದ ಬೇಟೆ ಸುಗಮವಾಗಿ ದೊರೆಯಲೆಂಬುದೇ ಇದರ ಮುಖ್ಯ ಉದ್ದೇಶವಾಗಿರಬಹುದು. ನೃತ್ಯ ಅಂದಿನ ಸಮಾಜದಲ್ಲಿದ್ದ ಸ್ವಚ್ಛಂದತೆ, ಸಹಬಾಳ್ವೆ ಹಾಗೂ ಸಾಮಾಜಿಕ ಚಿಂತನೆಗಳ ಪ್ರತೀಕವೆಂದೆನಿಸುತ್ತದೆ.

ಮಧ್ಯಯುಗದಲ್ಲಿ

ಮುಂದೆ ನಾಗರಿಕತೆಯ ಕಾಲದಲ್ಲಿ ಎಂದರೆ ಕ್ರಿಸ್ತಶಕೆಯ ಆರಂಭದಿಂದ ಮಧ್ಯಯುಗದವರೆಗೆ ಚಿತ್ರಕಲೆಯಲ್ಲಿ ಧಾರ್ಮಿಕ ಅಂಶಗಳೇ ಪ್ರಧಾನವಾಗಿ ಕಂಡುಬರುತ್ತವೆ. ಐರೋಪ್ಯ ದೇಶಗಳಲ್ಲಿ ಅವರ ಧಾರ್ಮಿಕ ಗ್ರಂಥಗಳಲ್ಲಿಯ ಕಥೆಗಳಿಗೆ ಹಾಗೂ ತತ್ವಗಳಿಗೆ ಸಂಬಂಧಿಸಿದ ಚಿತ್ರಣಗಳಿವೆ. ಭಾರತದಲ್ಲಿಯೂ ಬೌದ್ಧ, ಜೈನ ಹಾಗೂ ಹಿಂದೂ ಧಾರ್ಮಿಕ ಅಂಶಗಳು, ದೇವಾನುದೇವತೆಗಳು ಹಾಗೂ ಪುರಾಣ ಪುಣ್ಯಕಥೆಗಳ ಚಿತ್ರಗಳು ಕಂಡುಬರುತ್ತವೆ. ಇವುಗಳೆಲ್ಲ ಭಕ್ತಿ ಅಥವ ಶಾಂತ ಹಾಗೂ ಶೃಂಗಾರ ರಸಪ್ರಧಾನವಾದ ಚಿತ್ರಗಳು. ಕೆಲವೊಮ್ಮೆ ಕಲಾಕೃತಿಗಳೇ ನಮ್ಮಲ್ಲಿ ವಿಸ್ಮಯ ಅಥವ ಅದ್ಭುತವೆಂಬಂತಹ ಭಾವನೆಗಳನ್ನು ಬೀರಬಲ್ಲದು. ಗೊಮ್ಮಟೇಶ್ವರನ ಮೂರ್ತಿ ಶಿಲ್ಪ, ಟಿಬೆಟ್‌ನ ಠಂಕಾ

ಯೂಸೂಫ್ ಅರಕ್ಕಲ್

ದೃಶ್ಯಕಲೆಗಳ ಗುಣಗ್ರಹಣ

ಚಿಕಣಿ ಚಿತ್ರ



ವ್ಯಾನ್‌ಗೋ

ಕೆ. ಕೆ. ಹೆಬ್ಬಾರ್



ಜಿಯತೋ-ಡೈ-ಬಾಂಡೊನ್

ಆಲ್ಟಾಮಿರಾ, ಸ್ಪೇನ್

ಕೆ. ವೆಂಕಟಪ್ಪ

ಪಟಗಳು ಅಥವಾ ತಂಜಾವೂರಿನ ಬೃಹದೀಶ್ವರ ದೇವಾಲಯ ಇತ್ಯಾದಿಗಳಲ್ಲಿ ಕಂಡುಬರುವ ಬೃಹದಾಕಾರಗಳು ವಿಸ್ಮಯವನ್ನು ತರುತ್ತವೆ. ಅಂತೆಯೆ ಚಿಕ್ಕ ಅಳತೆಯ ಚಿಕಣಿ (ಮಿನಿಯೇಚರ್) ಚಿತ್ರಗಳಲ್ಲಿರುವ ಸೂಕ್ಷ್ಮವಾದ ರೇಖೆಗಳು, ನವಿರಾದ ಆಕಾರಗಳು ವಿಸ್ಮಯವಾದ ರಚನೆಯೆಂದು ಅನ್ನಿಸಬಹುದು.

ರಸಭಾವಗಳು

'ರಸಭಾವ' ಸಿದ್ಧಾಂತಗಳನ್ನು ಕುರಿತು ಪಾಶ್ಚಿಮಾತ್ಯ ಹಾಗೂ ಭಾರತೀಯ ವಿದ್ವಾಂಸರು ಚಿಂತನೆಗಳನ್ನು ನಡೆಸಿದ್ದಾರೆ. ಆದರೆ ಇವರೆಲ್ಲರೂ ಸಾಹಿತ್ಯ ಕೃತಿಗಳನ್ನೇ ಆಧಾರವಾಗಿಸಿಕೊಂಡು ವಿಷಯ ಪ್ರತಿಪಾದನೆ ಮಾಡಿದ್ದರೂ, ಕ್ವಚಿತ್ತಾಗಿ ಅಲ್ಲಲ್ಲಿ ಚಿತ್ರಕಲೆಯನ್ನೂ ಕುರಿತು ತಮ್ಮ ಅಭಿಪ್ರಾಯ ತಿಳಿಸುತ್ತಾರೆ. ಗ್ರೀಕ್ ತತ್ವಜ್ಞಾನಿ ಸಾಕ್ರಟೀಸ್(ಕ್ರಿ.ಪೂ.469) ವಿಷಸೇವನೆಯ ನಂತರ ಗೆಳೆಯರೊಂದಿಗೆ ಚರ್ಚಿಸುತ್ತಾ ಭಾವಚಿತ್ರಗಳ ಬಗ್ಗೆ ಅವು ಉದ್ದೀಪನಗೊಳಿಸುವ ವಿಚಾರಗಳ ಬಗ್ಗೆ ಚರ್ಚಿಸುತ್ತಿದ್ದ. ಆತನ ಶಿಷ್ಯ ಪ್ಲೇಟೋ (ಕ್ರಿ.ಪೂ. 427) ಚಿತ್ರಕೃತಿಗಳೆಲ್ಲ ದೈವ ಸೃಷ್ಟಿಯ ಪುನರ್‌ಸೃಷ್ಟಿಯೆಂದೂ, ಸರಳ ಮನಸ್ಕನು ಚಿತ್ರ ಕೃತಿಯನ್ನೇ ನೋಡಿ ನಂಬಿ ಮೋಸ ಹೋಗುವನೆಂದೂ ಪ್ರತಿಪಾದಿಸಿದ. ಪ್ರಪಂಚದ ಭೌತಿಕ ಸೌಂದರ್ಯದ ಮೂಲಕ ಪರಮ ಸೌಂದರ್ಯವನ್ನು ಮುಟ್ಟಬೇಕೆಂದೂ ತೋರಿಕೆಯ ಸೌಂದರ್ಯದ (ಎಂದರೆ ಮನುಷ್ಯ ಸೃಷ್ಟಿಯ) ಅಗತ್ಯ ಇಲ್ಲವೆಂದೂ ವಾದಿಸಿದ. ಸೌಂದರ್ಯ ಪ್ರಜ್ಞೆಯ ಮೊದಲ ವ್ಯಾಖ್ಯಾನಗಳಿವು.

ಚೆಲುವು ಅಥವಾ ಸೌಂದರ್ಯ ಎಂಬುದು ಆ ವಸ್ತುವಿನಲ್ಲಿ (ಕಲಾಕೃತಿಯಲ್ಲಿ) ಇದೆಯೊ ಅಥವಾ ಅದನ್ನು ನೋಡುವ ವ್ಯಕ್ತಿಯ ಮನಸ್ಸಿನಲ್ಲಿ ಇದೆಯೋ ಎಂದು ಸಹ ಚರ್ಚೆಯಾಗಿದೆ. ಎರಡೂ ಪಕ್ಷಗಳು ತಮ್ಮ ವಾದವನ್ನು ಸೋದಾಹರಣವಾಗಿ ಇಂದಿಗೂ ಮಂಡಿಸುತ್ತಿವೆ.

ಸಮಾಜವಾದದ ಪ್ರತಿಪಾದಕರಾದ ಲಿಯೋ ಟಾಲ್‌ಸ್ಟಾಯ್, ಅಬರ್ ಕ್ರಾಂಬಿ ಮುಂತಾದವರು ಕಲೆಯಲ್ಲಿ ಭಾವನೆಗಳೇ ಮುಖ್ಯವಾದರೂ ಪ್ರಯೋಜನಕಾರಿಯಾಗಿರಬೇಕೆಂದು ಬಯಸಿದರು. ಎಂದರೆ ಕಲೆಯಲ್ಲಿ ನೀತಿಯನ್ನು ಪ್ರತಿಪಾದಿಸುವ ಅಂಶಗಳು ಇದ್ದು ಸಮಾಜವನ್ನು ತಿದ್ದುವಂತಿರಬೇಕು ಎಂದು ಹೇಳಿದರು.

ಪಾಶ್ಚಾತ್ಯರು ಐಹಿಕ ದೃಷ್ಟಿಯಿಂದ ಸೌಂದರ್ಯ ಸಿದ್ಧಾಂತವನ್ನು ನೋಡಿದರೆ ಭಾರತೀಯ ಲಾಕ್ಷಣಿಕರು ಪಾರಮಾರ್ಥಿಕ 'ರಸ' ಸಿದ್ಧಾಂತದಿಂದ ಕಲಾಕೃತಿಗಳನ್ನು ಕಂಡರು. ಆಹಾರದಲ್ಲಿರುವ ಉಪ್ಪು, ಖಾರ, ಸಿಹಿ ಇತ್ಯಾದಿ 'ರಸ'ಗಳಂತೆ; ಕಾವ್ಯ ನಾಟಕಾದಿಗಳಲ್ಲೂ ಹಲವಾರು 'ಭಾವನೆ'ಗಳೆಂಬ 'ರಸೋತ್ಪತ್ತಿ' ಆಗುತ್ತದೆಯೆಂದೂ,

ಆಹಾರ ಸೇವನೆಯಿಂದ 'ರುಚಿ'ಯನ್ನು ಅನುಭವಿಸುವಂತೆ, ಇನ್ನೂ ಮೇಲುಮಟ್ಟದ 'ರುಚಿ'ಯನ್ನು ಕಾವ್ಯ, ನಾಟಕಾದಿ ಕಲೆಗಳಿಂದ ಸವಿಯಬಹುದೆಂದೂ ತೋರಿಸಿಕೊಟ್ಟರು.

ಭಾರತೀಯ ರಸ ಸಿದ್ಧಾಂತ ಆರಂಭವಾಗುವುದು ವಾಚ್ಯಾರ್ಥ ಹಾಗೂ ವ್ಯಂಗ್ಯಾರ್ಥಗಳಿಂದ. ಪದ ಅಥವಾ ವಾಕ್ಯಗಳಲ್ಲಿ ಕಂಡುಬರುವ ನೇರವಾದ ಅರ್ಥವೇ ವಾಚ್ಯಾರ್ಥ. ಇದು ಸುಲಭವಾಗಿ ಎಲ್ಲರಿಗೂ ಗ್ರಾಹ್ಯವಾಗುತ್ತದೆ. ಹಾಗೂ ದೈನಂದಿನಲ್ಲಿ ಬಳಕೆಯಾಗುತ್ತಿರುತ್ತದೆ. ಇದರಿಂದ ಭಿನ್ನವಾದ ಇನ್ನೊಂದು ವಿಧವಿದೆ. ಉದಾಹರಣೆಗೆ 'ಗಿಡ ಗಂಟೆಗಳ ಕೊರಳೊಳಗಿಂದ ಹೊರಟಿತು ಹಕ್ಕಿಗಳ ನಾದ' ಎಂದರೆ ಗಿಡದಲ್ಲಿರುವ ನೂರಾರು ಹಕ್ಕಿಗಳ ಕಲರವ ಒಟ್ಟಾಗಿ ಅದೇ ಗಿಡದ ಬಾಚಿದ ರೆಂಬೆಗಳೇ ಹಕ್ಕಿಗಳ ಕೊರಳಿಂಬಂತೆ ನಾದ ಹೊರಡಿಸುತ್ತಿತ್ತು ಎಂಬಂತೆ ವಿಶೇಷವಾದ ಅರ್ಥ ಬಂದು ಓದುಗನಿಗೆ ಸಾಮಾನ್ಯ ಅನುಭವಕ್ಕಿಂತ ಹೆಚ್ಚಿನ ಆನಂದವನ್ನು ತರುತ್ತದೆ. ಈ ರೀತಿಯ ಅತಿಶಯವಾದ ಅರ್ಥಕ್ಕೆ ವ್ಯಂಗ್ಯಾರ್ಥವೆಂದು ಕಾವ್ಯಗಳಲ್ಲಿ ಕರೆದಿದೆ. ಈ ತರದ ಭಾವನೆ ಚಿತ್ರ ಕಲೆಯಲ್ಲಿ ಇನ್ನೂ ಯಶಸ್ವಿಯಾಗಿ ತರಬಹುದು. ಇಡೀ ವೃಕ್ಷದ ಕೊಂಬೆರೆಂಬೆಗಳೆಲ್ಲ ಮಾನವಾಕೃತಿಯ ರೂಪದಲ್ಲಿ ಇರಿಸಬಹುದು. ಕಟುಕ ಬಂದು ಕಡಿಯುವಾಗ ಮೈಯಿಂದ ರಕ್ತ ಬಂದಂತೆ, ರೋದಿಸುತ್ತಿರುವಂತೆ ತೋರಿಸಬಹುದು. ಇದು ಕಟುಕನೊಬ್ಬ ಸಾಮಾನ್ಯ ಮರವನ್ನು ಕಡಿಯುವ ದೃಶ್ಯಕ್ಕಿಂತ ಹೆಚ್ಚಿನ ನೋವನ್ನು, ಆ ಮೂಲಕ ಕರುಣ ರಸವನ್ನು ಪ್ರೇಕ್ಷಕನಿಗೆ ನೀಡುತ್ತದೆ. ಹೀಗೆ ಹೆಚ್ಚಿನ ಭಾವನೆಗಳಿಗೆ 'ಧ್ವನಿ' ಎಂದೂ ಕರೆದಿದೆ. ಕೃತಿಕಾರನ ಕೌಶಲ್ಯ, ಜಾಣ್ಮೆ, ಬುದ್ಧಿ, ಓದು ಇತ್ಯಾದಿಗಳು ಹೆಚ್ಚಿದಷ್ಟೂ ಹೆಚ್ಚಿನ ಮಟ್ಟದಲ್ಲಿ ಕೃತಿಗಳು ಮೂಡುತ್ತದೆ. ಇವು ತೀರಾ ಕ್ಲಿಷ್ಟವಾಗಿದ್ದರೆ ಓದುಗ ಅಥವ ನೋಡುಗ ಗ್ರಹಿಸದೇ ಹೋಗಬಹುದು. ತೀರಾ ಸರಳವಾಗಿದ್ದರೂ ವಾಚ್ಯಾರ್ಥದಲ್ಲೆ ನಿಂತು ಹೋಗಿ ಸಾಮಾನ್ಯ ಕೃತಿ ಎಂದೆನಿಸಬಹುದು. ಆದುದರಿಂದ ನೋಡುಗನಲ್ಲಿಯೂ ಸ್ವಲ್ಪ ಮಟ್ಟಿಗೆ ಸಂಸ್ಕಾರವಿರಬೇಕಾದುದು ಅವಶ್ಯ.

ಗ್ರಾಫಿಕ್ ಕೃತಿಯೊಂದರಲ್ಲಿ ರೋಡ್ ರೋಲರ್ ಒಂದು ಇನ್ನೇನು ಹೂವೊಂದರ ಮೇಲೆ ಹೋಗಲಿರುವ ದೃಶ್ಯವಿದೆ. ಸಾಮಾನ್ಯ ಅರ್ಥದಲ್ಲಿ ಇದೊಂದು ಯಂತ್ರ. ಅದೊಂದು ಹೂ, ಅಷ್ಟೆ. ಆದರೆ ನೋಡುಗ ಆ ಹೂ ತಾನೆಂದೂ, ರೋಡ್‌ರೋಲರ್ ತನ್ನ ಯಜಮಾನನೆಂದೂ ಇನ್ನೇನು ತನ್ನ ಮೇಲೆ ಹರಿಹಾಯ್ದು ನನ್ನನ್ನು ಅಪ್ಪಚ್ಚಿ ಮಾಡುತ್ತಾನೆಂದೂ ಭಾವಿಸಬಹುದು. ಸಾವಿಗೆ ಹೆದರುವವನಿಗೆ ರೋಡ್ ರೋಲರ್ ಕಾಲಪುರುಷನಂತೆ ಕಾಣಬಹುದು. ಪ್ರಕೃತಿ ಪ್ರೇಮಿಗೆ ಹೂ ಇಡೀ ಪ್ರಕೃತಿಯನ್ನು ಪ್ರತಿನಿಧಿಸಬಹುದು, ರೋಲರ್ ಪ್ರಕೃತಿ ನಾಶಮಾಡುವ ಸಮಾಜದಂತೆ ಕಾಣಬಹುದು. ಇಂತಹ ಅನೇಕ ಉದಾಹರಣೆಗಳನ್ನು ಚಿತ್ರಕಲೆಯಲ್ಲಿ ಕೊಡಬಹುದು. 'ಪಂಥ(Ism)ಗಳ

ಕಾಲದಲ್ಲಿ ಸರ್ರಿಯಲಿಸಂ (Surrealism) ಎಂಬ ಒಂದು ಪಂಥದವರು ಈ ಬಗೆಯ ಹಲವಾರು ಪ್ರಯೋಗಗಳನ್ನು ಮಾಡಿದರು. ಕಾಲ ಸೂಚಕ ಗಡಿಯಾರ ಬಟ್ಟೆಯಂತೆ ಒದ್ದೆಯಾದಂತೆ, ದ್ರವೀಕರಿಸಿದಂತೆ, ವಿಡಂಬನಾತ್ಮಕವಾದ ಮಾನವಾಕಾರಗಳ ಸಹಿತ ಚಿತ್ರ ರಚಿಸಿದರು. ಡಾಲಿ ಎಂಬಾತ ಈ ಬಗೆಯ ಸಾವಿರಾರು ಕಲಾಕೃತಿ ರಚಿಸಿದ. ಇಲ್ಲೆಲ್ಲಾ ವ್ಯಂಗ್ಯಾರ್ಥ ಪರೋಕ್ಷವಾಗಿದ್ದು ನೋಡುಗನ ಅನುಭವಕ್ಕೆ ಬಂದು ಆ ಮೂಲಕ ರಸಾನುಭವ ನೀಡುವಂತದಾಗಿದೆ. ಆದರೆ ಚಿತ್ರಕಲೆಯಲ್ಲಿ ವ್ಯಂಗ್ಯ ಚಿತ್ರ ಮಾಲಿಕೆ (ಕ್ಯಾರಿಕೇಚರ್-ಕಾರ್ಟೂನ್) ಎಂಬ ಪ್ರಭೇದವಿದ್ದು ಇವು ನೇರವಾಗಿ ವಿಷಯವನ್ನು ಅಥವಾ ಆಕೃತಿಯನ್ನು ಉತ್ಪ್ರೇಕ್ಷಿಸಿ ಹೇಳುವಂತಹದು. ತಲೆಯ ಗಾತ್ರಕ್ಕಿಂತ ದೊಡ್ಡದಾದ ಮೂಗು ಅಥವಾ ಕಿವಿ, ದೇಹದ ಗಾತ್ರಕ್ಕಿಂತ ದೊಡ್ಡದಾದ ಹೊಟ್ಟೆ ಇತ್ಯಾದಿ ವಿಡಂಬಿಸಿ ನೇರವಾಗಿಯೇ ಹೇಳುವಂತಹ ಈ ಬಗೆಯ ಚಿತ್ರಗಳಲ್ಲೂ ಹಾಸ್ಯರಸಕಾಣಬಹುದು.

ಸಾಹಿತ್ಯದ ವರ್ಣನೆಗಿಂತ ಚಿತ್ರಕಲೆಯಲ್ಲಿ ದೃಶ್ಯಗಳನ್ನು ಯಶಸ್ವಿಯಾಗಿ ಚಾಕ್ಷುಷಗೊಳಿಸಬಹುದು. 'ಹಾರುತ್ತಿದೆ' ಎಂದರೆ ನಮಗೆ ಪಕ್ಷಿಗಳು ಅಥವಾ ವಿಮಾನ ಹಾರುತ್ತಿರುವುದೆಂಬ ಭಾವನೆ ಬರುತ್ತದೆ. ಆದರೆ ಚಿತ್ರದಲ್ಲಿ ಬಂಡೆಗಳೋ ಮೋಟಾರು ಗಾಡಿಗಳೋ ರೆಕ್ಕೆ ಹಚ್ಚಿ ಹಾರುತ್ತಿರುವಂತೆ ಚಿತ್ರಿಸಬಹುದು. ಇವು ಕನಸಿನೋಪಾದಿಯಲ್ಲಿ ಕಂಡು ವ್ಯಂಗ್ಯಾರ್ಥಕ್ಕೆ ಉತ್ತಮ ಉದಾಹರಣೆಯಾಗುತ್ತವೆ. ಕಾವ್ಯದಲ್ಲಿ ಈ ಬಗೆಯ 'ಧ್ವನಿ'(ಹೆಚ್ಚಿನ ಅರ್ಥ)ಗಳನ್ನು ಹಲವಾರು ಪ್ರಭೇದಗಳಲ್ಲಿ ಭಾರತೀಯ ಲಾಕ್ಷಣಿಕಾರರು ಗುರುತಿಸಿರುವಂತೆ ಚಿತ್ರಕಲೆಯಲ್ಲೂ ಅಧ್ಯಯನಗಳು ಆಗಬೇಕಿವೆ.

ಇದರ ಮುಂದಿನ ಹಂತ 'ರಸ'ಪ್ರತಿಪಾದನೆ. ಭಾರತೀಯರ ಮತದಂತೆ 'ರಸ'ಗಳು ಒಂಬತ್ತು. ಅವೆಂದರೆ ಶೃಂಗಾರ ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಮತ್ತು ಶಾಂತರಸಗಳು. ಇವುಗಳಿಗೆ ಸಂಚಾರಿ ಭಾವಗಳು, ಸ್ಥಾಯೀ ಭಾವಗಳು, ವ್ಯುತ್ಪತ್ತಿಗಳು ಇತ್ಯಾದಿ ಹಲವಾರು ಪ್ರಭೇದಗಳಿವೆ. ಇವುಗಳಲ್ಲಿ ನೂರಾರು ಒಳಭೇದಗಳು. ವ್ಯತ್ಯಾಸಗಳೂ ಸಹ ಇವೆ. ವಿರೋಧ, ಅವಿರೋಧಗಳೂ ಉಂಟು. ವಿರುದ್ಧ ರಸಗಳು ಸೇರಿದರೆ ರಸಾಭಾಸವಾಗುತ್ತದೆ ಎನ್ನುವ ಅಭಿಪ್ರಾಯ ಅವರದಾಗಿತ್ತು.

ರಸಗಳಲ್ಲಿ ಪ್ರಥಮವಾದುದು, ಹಾಗೂ ಕಾವ್ಯ ನಾಟಕಾದಿ ಲಲಿತ ಕಲೆಗಳಲ್ಲಿ ಪ್ರಧಾನವಾದುದು 'ಶೃಂಗಾರ'ರಸ. ಪ್ರಿಯ ಪ್ರಿಯೆಯರು ಸಲ್ಲಾಪಗೈಯ್ಯುತ್ತಿರುವ, ಶೃಂಗಾರ ನಿರತರಾಗಿರುವ, ಕ್ರೀಡಿಸುತ್ತಿರುವ ಸಾವಿರಾರು ಚಿತ್ರಣಗಳು ನಮಗೆ ದೊರೆಯುತ್ತವೆ. ಪ್ರಿಯ ಪ್ರಿಯೆಯರು ಅಗಲಿದಾಗಲೂ ಅದು 'ವಿರಹ'ಶೃಂಗಾರವಾಗುತ್ತದೆ. ರಾಗಮಾಲಾ ಚಿಕಣಿ ಚಿತ್ರಗಳಲ್ಲಿ ಕೃಷ್ಣ ಲೀಲೆಯ ಹೆಸರಿನಲ್ಲಿ ರಚಿತವಾದ ಕೃತಿಗಳು ಪ್ರಸಿದ್ಧವಾಗಿವೆ. ಭಾರತೀಯ ಚಿತ್ರ ಶಿಲ್ಪಗಳಲ್ಲಿ 'ಹಾಸ್ಯ'ದ ಚಿತ್ರಣ ಕಡಿಮೆ. ಶೃಂಗಾರ ನಿರತ ಲೈಂಗಿಕ

ಚಿತ್ರ, ಶಿಲ್ಪಗಳಲ್ಲಿ ಕೆಲವು ಹಾಸ್ಯ ಪ್ರಸಂಗಗಳನ್ನು ಕಾಣಬಹುದು. ಉಳಿದಂತೆ ಅಜಂತೆಯ ಕೆಲವು ಬುದ್ಧನ ಚಿತ್ರದಲ್ಲಿ ಕರುಣೆಯನ್ನು; ತ್ರಿಪುರ ಸಂಹಾರ ಹಾಗೂ ಐತಿಹಾಸಿಕ ಯುದ್ಧದ ಚಿತ್ರಣಗಲ್ಲಿ ರೌದ್ರವನ್ನು; ಅಸಂಖ್ಯಾತ ವೀರಗಲ್ಲುಗಳಲ್ಲಿ ವೀರರಸವನ್ನು, ಲೇಪಾಕ್ಷಿ, ಹಿರಿಯೂರುಗಳಲ್ಲಿ ಚಿತ್ರಿತವಾಗಿರುವ ಶಬರಶಂಕರ ವಿಲಾಸ ಚಿತ್ರಣದಲ್ಲಿ ಭಯಾನಕತೆಯನ್ನು; ಬೇಗೂರು (ಈಗ ಬೆಂಗಳೂರು ಮ್ಯೂಸಿಯಂನಲ್ಲಿರುವ) ಹಾಗೂ ಕೋಲಾರದ ವೀರಗಲ್ಲುಗಳಲ್ಲಿ ಬೀಭತ್ಸ ರಸವನ್ನು ಕಾಣಬಹುದು. ಎಲ್ಲೋರದ ಕೈಲಾಸ ದೇವಾಲಯ, ಶ್ರವಣ ಬೆಳಗೊಳದ ಗೊಮ್ಮಟ ಇತ್ಯಾದಿಗಳ ರಚನೆಯೇ ನೋಡುಗನಲ್ಲಿ ವಿಸ್ಮಯವನ್ನು ಮೂಡಿಸಬಹುದು. ರಸಗಳ ಪಟ್ಟಿಗೆ ಶಾಂತರಸ ಕೊನೆಯಲ್ಲಿ ಸೇರಿದ್ದೆಂದು ಹಲವರ ಅಭಿಪ್ರಾಯ. ಆದರೆ ಭಾರತೀಯ ಚಿತ್ರ-ಶಿಲ್ಪಗಳಲ್ಲಿ ವಿಶೇಷವಾಗಿ ಬುದ್ಧ, ಜಿನ ಹಾಗೂ ವೈದಿಕ ದೇವತೆಗಳ ನಿಲುವು, ಭಂಗಿಗಳಲ್ಲಿ ಶಾಂತತೆಯನ್ನು ಕಾಣುತ್ತೇವೆ. ಅವುಗಳ ದರ್ಶನ, ಧ್ಯಾನಗಳೇ ನಮ್ಮಲ್ಲಿ ಶಾಂತಿ ಸಮಾಧಾನಗಳನ್ನು ನೀಡುವಂತೆ ತೋರುತ್ತದೆ.

ಈ ನವರಸಗಳಿಗೆ ಒಂಬತ್ತು ಬಣ್ಣಗಳನ್ನು ಸಹ ಹೇಳಿದೆ. ಶೃಂಗಾರಕ್ಕೆ ಶ್ಯಾಮ, ರೌದ್ರಕ್ಕೆ ಕೆಂಪು; ವೀರಕ್ಕೆ ಗೌರ(ಬಿಳಿ); ಬೀಭತ್ಸಕ್ಕೆ ನೀಲ; ಹಾಸ್ಯಕ್ಕೆ ಬಿಳಿ; ಕರುಣಕ್ಕೆ ಬೂದು; ಅದ್ಭುತಕ್ಕೆ ಹಳದಿ; ಭಯಾನಕಕ್ಕೆ ಕಪ್ಪು. ಆಯಾ ರಸ ಪ್ರಧಾನವಿರುವ ಚಿತ್ರಣಕ್ಕೆ ಪೂರಕವಾಗಿ ಈ ಬಣ್ಣಗಳ ಬಳಕೆಯಾಗಿದೆಯೇ ಎಂದು ಕೃತಿಗಳಲ್ಲಿ ಹುಡುಕುವುದು ಕಷ್ಟಸಾಧ್ಯ.

ಭಾರತೀಯ ಕಾವ್ಯ ಮೀಮಾಂಸಕಾರರು ಸಹ ಎಲ್ಲ ರಸಗಳಿಗೂ ಅವುಗಳಿಂದ ಉಂಟಾಗುವ ಆನಂದ ಇತ್ಯಾದಿಗಳಿಗೂ ದೈವತ್ವದ ಕಲ್ಪನೆಯನ್ನು ಹೊಂದಿಸಿದ್ದಾರೆ. ರಸಾಸ್ವಾದನೆಯನ್ನು ಬ್ರಹ್ಮಾನಂದದ ಸೋದರ ಎಂದೂ ಕರೆದಿದ್ದಾರೆ.

ಭಾರತದಲ್ಲಿ

ಮಧ್ಯಯುಗದಲ್ಲಿ ಐರೋಪ್ಯ ದೇಶಗಳಲ್ಲಿ ಸಾಮಾನ್ಯ ಜನಜೀವನದತ್ತ ಕಲಾವಿದರ ದೃಷ್ಟಿಬಿದ್ದು ದೈನಂದಿನ ವಸ್ತುಗಳನ್ನೂ ಚಿತ್ರಕಲೆಯಲ್ಲಿ ತಂದರು. ಭಾರತದಲ್ಲಿ ಮುಸ್ಲಿಂ ರಾಜರ ಆಡಳಿತದಲ್ಲಿ ರಾಜರ ಹಾಗೂ ಶ್ರೀಮಂತರ ವೈಭವಯುತ ಜೀವನವೇ ಪ್ರಧಾನವಾಗಿ ಚಿತ್ರಿತವಾಗುತ್ತಿತ್ತು. ಬೇಟೆ, ಸಂಗೀತಗೋಷ್ಠಿ, ವಿಲಾಸಿ ಜೀವನದ ಚಿತ್ರಣದಲ್ಲಿ ಆಯಾ ರಸಕ್ಕೆ ಪೋಷಿತವಾದ ವಾತಾವರಣವಿರುತ್ತಿತ್ತು. ಈ ಕಾಲದ ಮುಖ್ಯ ಚಿತ್ರ ಪ್ರಕಾರಗಳಲ್ಲಿ ಒಂದೆಂದರೆ 'ರಾಗಮಾಲಾ' ಚಿತ್ರಗಳು. ಮೊದಲಿಗೆ ದಖ್ಖಿನಿ, ನಂತರ ಮುಘಲ್ ಮತ್ತು ರಾಜಸ್ಥಾನಿ ಚಿತ್ರಗಳಲ್ಲಿ ಸಂಗೀತ ಪ್ರಧಾನವಾದ ಈ ರಾಗಮಾಲಾ ಚಿತ್ರಗಳು ವಿಫುಲ ಸಂಖ್ಯೆಯಲ್ಲಿ ರಚಿತವಾದವು. ಸಂಗೀತದ ಹಲವಾರು 'ರಾಗ'ಗಳಿಗೆ

ನಿಶ್ಚಿತರೂಪ, ಆಕಾರ, ಬಣ್ಣ, ನಿಲುವು ಉಪಕರಣಗಳನ್ನು ನೀಡಿ ಅವುಗಳಿಗೆ ವೈವಿಧ್ಯಮಯವಾಗಿ ದೃಶ್ಯರೂಪ ತಂದಿದ್ದಾರೆ. ಹಲವೊಮ್ಮೆ ಪೂರಕವಾಗಿ ಆಯಾ 'ರಸ' ಸ್ಫುರಿಸುವಂತಹ ಶ್ಲೋಕ ಇಲ್ಲವೆ ಗೀತೆಗಳನ್ನು ಲಿಪಿಯಲ್ಲಿ ಬರೆದಿದ್ದಾರೆ. ಇವುಗಳ ವೀಕ್ಷಣೆಯಿಂದ ಆಯಾ ರಸಭಾವಗಳು ಮೂಡಿ ರಸಾನುಭವವುಂಟಾಗುತ್ತವೆ. ಇಲ್ಲಿ ಸಂಗೀತ ಜ್ಞಾನವೂ ಇದ್ದರೆ ರಸಾಸ್ವಾದನೆ ಇನ್ನಷ್ಟು ಪರಿಣಾಮಕಾರಿಯಾಗುತ್ತದೆ.

ಸಂಕೇತಗಳು

ಮಧ್ಯಯುಗದ ಈ ಎಲ್ಲ ಚಿತ್ರಗಳೂ (ಐರೋಪ್ಯ ಹಾಗೂ ಭಾರತೀಯ) 'ಸಂಕೇತ' ಪ್ರಧಾನವಾದವು. ಎಂದರೆ ಚಿತ್ರಿತ ಮುಖ್ಯ ಆಕೃತಿಗಳಿಗೆ ಅಥವಾ ಕಥಾದೃಶ್ಯಗಳಿಗೆ ಪೂರಕವಾಗಿ ಹಲವಾರು ಇನ್ನಿತರ ಆಕಾರಗಳನ್ನು ಹೊಂದಿಸುವುದು. ಹೂಗಳಿಂದ ಆವೃತವಾದ ಹುಡುಗಿಯ ಚಿತ್ರವಿದ್ದಲ್ಲಿ ಅವಳು ಹೂವಿನಷ್ಟೇ ಸುಕೋಮಲ ಎಂದೋ, ಕಂಬವೊಂದರ ಮುಂದೆ ಮನುಷ್ಯನೊಬ್ಬ ನಿಂತಾಗ ಆತ ಆ ಕಂಬದಷ್ಟೇ ಬಲಿಷ್ಠ, ದೃಢ ಎಂದೋ ಹೇಳಿದಂತಾಗುತ್ತದೆ. ಉದಯಿಸುತ್ತಿರುವ ಸೂರ್ಯ ಹೊಸ ಹುಟ್ಟಿಗೆ ಗಿರಿಶಿಖರಗಳು ಔನ್ನತ್ಯಕ್ಕೆ, ಸಮುದ್ರ ವೈಶಾಲ್ಯತೆಗೆ ಇತ್ಯಾದಿ ಪ್ರಾಕೃತಿಕ ಸಂಕೇತಗಳಲ್ಲದೆ ದೈನಂದಿನ ಉಪಕರಣಗಳಾದ ಕುರ್ಚಿ ಅಧಿಕಾರಕ್ಕೆ, ಸರಳುಗಳ ಕಿಟಕಿ ಬಂಧನಕ್ಕೆ, ಏಣಿ ಅಥವ ಮಹಡಿ ಹಂತ ಹಂತವಾಗಿ ಮೇಲೇರುವುದಕ್ಕೆ ಸಂಕೇತವಾಗಬಹುದು. ಭಾವನಾತ್ಮಕವಾಗಿಯೂ ಸಿಂಹ ಬಲಿಷ್ಠತೆಗೆ, ಹಾವು ಕಾಮಕ್ಕೆ ಸಂಕೇತವಾಗಬಹುದು. ಹೀಗೆ ದೈನಂದಿನಲ್ಲಿ ನಮಗೆ ಗೋಚರವಾಗುವ ಪ್ರಕೃತಿ ವ್ಯಾಪಾರಗಳ ಉಪಕರಣಗಳ ಗುಣವಿಶೇಷಗಳನ್ನು ಚಿತ್ರದ ಮುಖ್ಯ ಆಶಯಕ್ಕೆ ಕಲಾವಿದರು ಬಳಸಿಕೊಂಡಿದ್ದಾರೆ. ಭಾರತದಲ್ಲಿ ಧಾರ್ಮಿಕ ಸಂಬಂಧಿಯಾದ ಸಂಕೇತಗಳು ಅಸಂಖ್ಯಾತವಾಗಿವೆ. ನಾವು ದೇವಾನುದೇವತೆಗಳನ್ನು ಗುರುತಿಸುವುದು ಅವರ ಬಳಿ ಇರುವ ವಸ್ತು ವಿಶೇಷಗಳಿಂದಲೇ. ವೀಣಾ ಪಾಣಿ ಸರಸ್ವತಿಯಾದರೆ; ಶಂಖ, ಚಕ್ರ, ಗಧಾ ಪದ್ಮಧಾರಿ ವಿಷ್ಣುವಾಗುತ್ತಾನೆ. ಅಂತೆಯೇ ವೃಷಭವಾಹನ ಶಿವನಾದರೆ ಇಂದ್ರನದು ಐರಾವತ. ಈ ಸಂಕೇತಗಳ ಪರಿಚಯವಿಲ್ಲದಿದ್ದಲ್ಲಿ ಆಯಾ ವ್ಯಕ್ತಿಯನ್ನಾಗಲೀ, ದೇವತೆಗಳನ್ನಾಗಲೀ ಗುರುತಿಸುವುದು ಅಸಾಧ್ಯವಾಗಿ, ಕೃತಿಕಾರ ಏನು ಹೇಳುತ್ತಿದ್ದಾನೆಂದೇ ತಿಳಿಯದೇ ಹೋಗಬಹುದು. ತಪ್ಪಾಗಿ ಅರ್ಥೈಸಿದಲ್ಲಿ ಇನ್ನಷ್ಟು ಗೊಂದಲಗಳಾಗಬಹುದು. ಆದರೂ ಸಂಕೇತಗಳ ಗೊಡವೆಗೆ ಹೋಗದೆ ಆಕೃತಿಗಳನ್ನು ಇರಿಸಿರುವ ರೀತಿ, ಸಂಯೋಜನೆ, ಬಣ್ಣಗಾರಿಕೆ ಇತ್ಯಾದಿಗಳೇ ಅಲ್ಪ ಪ್ರಮಾಣದಲ್ಲಿಯಾದರೂ ಮನಸ್ಸಿನ ಮೇಲೆ ಪರಿಣಾಮ ಬೀರಬಹುದು.

ನವ್ಯತೆ

ಚಿತ್ರಕಲೆಯ ಮುಂದಿನ ರೂಪವೆಂದರೆ ಆಧುನಿಕ (ಮಾಡರ್ನ್) ಚಿತ್ರಗಳು. ಇವು

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಳೆದ ಶತಮಾನದ ಅಂತ್ಯದಲ್ಲಿ ಕಾಣಿಸಿಕೊಂಡಿತು. ಕ್ಯಾಮರಾ ಹಾಗೂ ವೈಜ್ಞಾನಿಕ ಅನ್ವೇಷಣೆಗಳಿಂದಾಗಿ ಸಾಹಿತ್ಯವೂ ಸೇರಿದಂತೆ ಲಲಿತಕಲೆಗಳಲ್ಲಿ ಸಮಗ್ರ ಬದಲಾವಣೆಗಳಾದವು. ಹಂತಹಂತವಾಗಿ ನಡೆದ ಈ ಬದಲಾವಣೆಗಳನ್ನು ಪಂಥಗಳು ಅಥವಾ 'ಇಸಂ'ಗಳ ಮೂಲಕ ಗುರುತಿಸುವ ಪರಿಪಾಠವಿದೆ. (ಈ ಮಾಲಿಕೆಯಲ್ಲಿ 'ಇಸಂ'ಗಳನ್ನು ಕುರಿತು ಪ್ರತ್ಯೇಕ ಪುಸ್ತಕಗಳು ಪ್ರಕಟವಾಗುತ್ತಿವೆ.) ಹಿಂದೆ ತಿಳಿಸಿದಂತೆ ಇವುಗಳಲ್ಲಿ ನೆರಳು-ಬೆಳಕು ಹಾಗೂ ಬಣ್ಣದ ಹರಹುಗಳೂ ಪ್ರಧಾನವಾಗಿರುತ್ತವೆ. ಕೆಲವೊಮ್ಮೆ ಚಿತ್ರಿತ ವಿಷಯ ತೀರ ಗೌಣ ಅಥವ ವಿಷಯ ರಹಿತ ಭಾವನೆಗಳೇ ಮುಖ್ಯ. ಬಣ್ಣ ಹಾಗೂ ಬೆಳಕುಗಳೇ ಪ್ರಧಾನವಾದ ಇಂಪ್ರೆಷನಿಸಂ, ಅಭಿವ್ಯಕ್ತಿ ಮುಖ್ಯವಾದ ಎಕ್ಸ್‌ಪ್ರೆಷನಿಸಂ, ಜ್ಯಾಮಿತೀಯ ಆಕಾರಗಳಿಂದ ಕೂಡಿದ ಕ್ಯೂಬಿಸಂ, ಮೃಗೀಯ ಅನುಭವ ನೀಡುವ ಫಾವಿಸಂ, ಅನಿರ್ಬಂಧಿತವಾದ ದಾದಾಯಿಸಂ ಇತ್ಯಾದಿಗಳು ಈ ಪಂಥಗಳಲ್ಲಿ ಮುಖ್ಯವಾದವು.

ಇಸಂ ಕಾಲಕ್ಕೆ ಮೊದಲಿನ ಚಿತ್ರಗಳು 'ವ್ಯಾಕರಣ'ಬದ್ಧವಾಗಿದ್ದವು. ಎಂದರೆ ಚಿತ್ರರಚನೆಗೆ ಮೊದಲು ವಿಷಯದ ಆಯ್ಕೆ, ರೂಪದರ್ಶಿ ಇರಿಸಿಕೊಂಡು ಹಲವಾರು ಕರಡು ನಕ್ಷೆಗಳ ರಚನೆ ಮಾಡಿ ಫಲಕದ ಮೇಲೆ ಸಂಯೋಜನಾ ತತ್ವಕ್ಕೆ ಅನುಗುಣವಾಗಿ ಹೊಂದಿಸಿ, ನೈಜತೆಗೆ ಹತ್ತಿರವಾದ ಬಣ್ಣಗಳನ್ನು ಬಳಸಿ, ಅಲಂಕಾರಯುತವಾಗಿ, ಸುಂದರವಾಗಿ ಚಿತ್ರ ರಚಿಸುತ್ತಿದ್ದರು. ಇಸಂಗಳ ಕಾಲದಲ್ಲಿ ಈ ವ್ಯಾಕರಣ ನಿಯಮಗಳನ್ನು ಕೈಬಿಡಲಾಯಿತು. ಸ್ವಚ್ಛಂದವಾಗಿ, ನೇರವಾಗಿ ಫಲಕದ ಮುಂದೆ ಕುಳಿತು ಶೂನ್ಯ ಮನಃಸ್ಥಿತಿಯಿಂದ ಆಕಾರಗಳನ್ನು ರೂಪಿಸುವಂತಾಯಿತು. ರಚನೆ ಇನ್ನೂ ಮುಂದಕ್ಕೆ ಹೋಗಲಾರದೆನಿಸಿದಾಗ, ಸಾಕೆನಿಸಿದಾಗ ನಿಲ್ಲಿಸುವಂತಾಯಿತು. ಅವರೆಗೆ ಕುರೂಪ ಎನ್ನುತ್ತಿದ್ದ ಅಸುಂದರ ಎಂದು ಕರೆಯುತ್ತಿದ್ದ ಆಕಾರಗಳಲ್ಲೂ ಸೌಂದರ್ಯ ಕಾಣಬಹುದೆಂಬ ಭಾವನೆ ಬೆಳೆಯಿತು. ತೀಕ್ಷ್ಣವಾದ ಅಥವ ಕಹಿಯಾದ ಪದಾರ್ಥಗಳಲ್ಲೂ ಮಾದಕವಾದ ಒಂದು ರುಚಿಯಿದೆ ಎಂಬಂತೆ ಆಕಾರಗಳನ್ನು ವಿರೂಪಗೊಳಿಸುತ್ತ (ಡಿಸ್ಟಾರ್‌ಷನ್) ಹೋಗುವುದೂ ಸಹ ಒಂದು ಮುಖ್ಯ ಶೈಲಿ ಎಂದೆನಿಸಿತು. ಈ ಬಗೆಯ-ಎಂದರೆ ಆಧುನಿಕ ಚಿತ್ರಗಳ ರಸಾಸ್ವಾದನೆ ಅಥವ ಗುಣಗ್ರಹಣ ಮಾಡಲು ಹೆಚ್ಚಿನ ಪರಿಶ್ರಮ ಅವಶ್ಯಕ. ಬೇರೆ ಬೇರೆ ಪ್ರದೇಶದ ಕಲಾವಿದರ ಹಾಗೂ ಶೈಲಿಯ ಸಾವಿರಾರು ಕೃತಿಗಳಿದ್ದು ಅವುಗಳ ಪರಿಚಯ, ಹಿನ್ನೆಲೆಯ ಅರಿವು ಮುಖ್ಯ, ಕೃತಿಗಳನ್ನು ಪದೇ ಪದೇ ನೋಡುವುದರಿಂದ ಅವು ಹತ್ತಿರ ವಾಗಬಹುದು. ಗ್ರಾಹ್ಯವೂ ಆಗಬಹುದು. (ಪಾಶ್ಚಿಮಾತ್ಯ ಕಲಾವಿದರ ಮೂಲಕೃತಿಗಳನ್ನು ಭಾರತದಲ್ಲಿ ನೋಡಲೂ ಅಪ್ಪಾಗಿ ಸಾಧ್ಯವಿಲ್ಲ. ಕೇವಲ ಮುದ್ರಿತ ಪ್ರತಿಕೃತಿಗಳಿಂದಷ್ಟೆ ತೃಪ್ತಿಪಡಬೇಕಾಗಿದೆ) 'ಇಸಂ'ಗಳ ಚಳವಳಿ ತಡವಾಗಿಯಾದರೂ ಭಾರತದಲ್ಲಿ ಕಾಣಿಸಿಕೊಂಡಿದ್ದು ಕೆ. ಕೆ. ಹೆಬ್ಬಾರ್, ಹುಸೇನ್ ಮೊದಲಾದವರು ಅನೇಕ ಪ್ರಯೋಗಗಳನ್ನು ಮಾಡಿದ್ದಾರೆ.

ಸಂಯೋಜನೆ

ಚಿತ್ರಕಲೆಯಲ್ಲಿ ಕೆಲವೊಮ್ಮೆ ವಿಷಯವೇ ಪ್ರಧಾನವಾದರೂ, ರೇಖೆ(line)ಗಳ ಓಟ, ಬಣ್ಣಗಳು(Colour), ನೆರಳು-ಬೆಳಕಿನಿಂದಾಗಿ ಕಂಡುಬರುವ ಆಕಾರಗಳ ದುಂಡುತನ(Value), ಆಕಾರಗಳು (Shape), ಮೈವಳಿಕೆ (Texture) ಹಾಗೂ ಆಕಾರಗಳ ಮಧ್ಯದ ತೆರಪು(Space)ಗಳೂ ಮುಖ್ಯವಾಗುತ್ತವೆ. ಇವುಗಳ ಕಲಾತ್ಮಕ ಸಂಯೋಜನೆಯೇ (Composition) ಚಿತ್ರಕೃತಿಯಾಗುತ್ತದೆ.

ಒಂದು ಕಲಾಕೃತಿ ಯಾವುದೇ ಪ್ರಮುಖ ವಿಷಯವನ್ನು, ವಸ್ತುವನ್ನು ಕುರಿತದ್ದಾದರೂ ಅದರ ಕಲಾತ್ಮಕ ಮೌಲ್ಯವನ್ನು ನಿರ್ಧರಿಸುವುದು ಅದರ ಸಂಯೋಜನೆಯ ಮೂಲಕವೇ. ಯಾವುದೇ ಒಂದು ಚಿತ್ರಕಲಾಕೃತಿ ನೋಡುಗನ ಮೇಲೆ ಉಂಟುಮಾಡುವ ಪರಿಣಾಮದಲ್ಲಿ ಚಿತ್ರ ಸಂಯೋಜನೆ ಅಥವಾ ಯೋಜನೆ ತುಂಬ ಮುಖ್ಯವಾದ ಸ್ಥಾನವನ್ನು ಗಳಿಸುತ್ತದೆ. ಲಂಬವಾದ ಸ್ಥಳ ಹೆಚ್ಚುಳ್ಳ (Vertical) ಎತ್ತರದ ಅಥವಾ ಸಮಾನಾಂತರವಾದ ಸ್ಥಳ ಹೆಚ್ಚುಳ್ಳ ಅಗಲದ (Horizontal) ಅಥವಾ ಉದ್ದ, ಅಗಲಗಳೆರಡೂ ಸಮಾನವಾಗುಳ್ಳ ಚಿತ್ರಕ್ಷೇತ್ರಗಳುಳ್ಳ ಫಲಕಗಳು ತಮ್ಮ ಆಕೃತಿಗಳಿಗೆ ಅನುಗುಣವಾಗಿ ವಿಭಿನ್ನ ಭಾವನೆಗಳನ್ನು, ಪರಿಣಾಮಗಳನ್ನು ನೋಡುಗನಲ್ಲಿ ಉಂಟುಮಾಡಬಲ್ಲವು ಎಂಬುದನ್ನು ನಾವು ತಿಳಿದಿದ್ದೇವೆ. ಹೀಗೆ ನಿಶ್ಚಿತವಾದ ಪರಿಣಾಮವನ್ನುಂಟುಮಾಡುವಂತಹ ಈ ಚಿತ್ರಕ್ಷೇತ್ರದಲ್ಲಿ ಯಾವ ಸ್ಥಳದಲ್ಲಿ ಯಾವ ಆಕೃತಿಯನ್ನು, ಯಾವ ಅಳತೆಯಲ್ಲಿ ಕಲಾವಿದ ಇಟ್ಟಿದ್ದಾನೆಂಬುದೂ ಮುಖ್ಯವಾಗುತ್ತದೆ. ಉದಾಹರಣೆಗೆ ಅವನು ಒಂದು ಚಂದ್ರನ ಆಕೃತಿಯನ್ನು ಬರೆದಿದ್ದರೆ, ಅದು ಸಂಯೋಜನೆಯ ದೃಷ್ಟಿಯಿಂದ ಚಂದ್ರನಿಗಿಂತಲೂ ಒಂದು ವೃತ್ತವಾಗಿ ಕಾಣಿಸಿಕೊಳ್ಳುತ್ತದೆ. ಅಂತೆಯೇ ವಿವಿಧ ವಸ್ತು, ವ್ಯಕ್ತಿ, ಪ್ರಾಣಿಗಳ ಒಟ್ಟು ಆಕೃತಿಗಳು ತಮ್ಮ ನಿಜವಾದ ಅರ್ಥಗಳಿಗಿಂತಲೂ ಒಟ್ಟಾದ ಸರಳೀಕೃತ ಆಕೃತಿಯನ್ನಾಗಿ ಇಲ್ಲಿ ಸ್ವೀಕರಿಸಬೇಕಾಗುತ್ತದೆ. ಹೀಗೆ ವಿವಿಧ ಆಕೃತಿಗಳ ಸಂತುಲನೆ ಅಥವಾ ಅಸಂತುಲನೆಯನ್ನು ಕಲಾವಿದ ಹೇಗೆ? ಯಾವ ಅಶಯದಿಂದ ಯಾವ ಪರಿಣಾಮ ಮೂಡಿಸುವ ದೃಷ್ಟಿಯಿಂದ ಮಾಡಿದ್ದಾನೆಂಬುದು ಮುಖ್ಯವಾಗುತ್ತದೆ. ಇಲ್ಲಿ ಸಂತುಲನೆ ಎಂದಾಗ ಚಿತ್ರಕ್ಷೇತ್ರದಲ್ಲಿ ವಿನ್ಯಾಸ, ಆಕೃತಿಗಳ ಸಮೂಹ, ರೂಪ, ಬಣ್ಣಗಳ ಸಮೂಹ, ರೂಪ, ಬಣ್ಣಗಳನ್ನು 'ಸೌಂದರ್ಯ'ದ ದೃಷ್ಟಿಯಿಂದ, ಕಣ್ಣಿಗೆ ಸಂತೋಷ ಕೊಡುವಂತೆ ತರುವುದು; ಅವುಗಳಲ್ಲಿ ಹೊಂದಾಣಿಕೆ ತರುವುದು ಕಲಾವಿದರ ಆಶಯವಾಗಿರುತ್ತದೆ. ಹೀಗೆ ಆಕೃತಿಗಳ ಯೋಜನೆಯಂತೆಯೇ ಚಿತ್ರಕೃತಿಯ ಮೈವಳಿಕೆ(Texture)ಯೂ ತುಂಬ ಗಮನಾರ್ಹವಾದ ಸ್ಥಾನವನ್ನು ಗಳಿಸುತ್ತದೆ. ಬಣ್ಣವನ್ನು ವೈವಿಧ್ಯಮಯವಾಗಿ ಮೆತ್ತಿರುವ, ಮುಟ್ಟಿದರೆ ವಿಶಿಷ್ಟವಾದ ಸ್ಪರ್ಶಾನುಭವ ನೀಡುವಂತಾದ್ದನ್ನು ಮೈವಳಿಕೆ ಎಂದೆನ್ನಬಹುದು. ಈ ವಿವಿಧ ರೀತಿಯ

ಅಥವಾ ವಿವಿಧ ತಂತ್ರಗಳಲ್ಲಿ ಸೃಷ್ಟಿಸಿರುವ ಮೈವಳಿಕೆಗಳೂ ವಿಭಿನ್ನ ಪರಿಣಾಮಗಳನ್ನು ನೋಡುಗನಲ್ಲಿ ಉಂಟುಮಾಡುತ್ತವೆ.

ಫಲಕದಲ್ಲಿ ರೇಖೆಯನ್ನು ಉದ್ದಕ್ಕೆ ಕೆಳಗಿನಿಂದ ಮೇಲಕ್ಕೆ ಇರಿಸಿದಲ್ಲಿ ಔನ್ನತ್ಯವನ್ನು, ಅಡ್ಡವಾಗಿ ಹಾಯ್ದಲ್ಲಿ ವಿಶ್ರಾಂತಿ ಸ್ಥಿತಿಯನ್ನು, ಮೂಲೆಯಿಂದ ಮೂಲೆಗೆ ಎಳೆದಲ್ಲಿ ಚಲನೆಯನ್ನು, ಅಲೆ ಅಲೆಯಾಗಿದ್ದಲ್ಲಿ ಏರಿಳಿತದ ಅನುಭವಗಳನ್ನು ಸೂಚಿಸುತ್ತವೆ. ಈ ನಮೂನೆಯಲ್ಲಿ ರೇಖೆಗಳನ್ನು ಬಳಸಿ ಆಕೃತಿಗಳನ್ನು ರಚಿಸಿದಲ್ಲಿ ಆಯಾ ಭಾವನೆಗಳು ಮನದ ಮೇಲೆ ಮೂಡಬಹುದು. ಈ ರೇಖಾ ಚಿತ್ರಕ್ಕೆ ಪೂರಕ ಬಣ್ಣಗಳನ್ನು ಹಚ್ಚಿ ಉದ್ದೇಶವನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು. ನೆರಳು-ಬೆಳಕಿನ ಛಾಯಾಂಕನ ಮಾಡಿ ನೈಜತೆಯ ಹತ್ತಿರ ತರಬಹುದಲ್ಲದೆ ದ್ವಿಪರಿಮಾಣದ ಚಿತ್ರದಲ್ಲಿ ಆಳದ ಕಲ್ಪನೆಯನ್ನು ತರಬಹುದು. ಚಿತ್ರಕೃತಿಯಲ್ಲಿ ಈ ಬಗೆಯ ಹಲವಾರು ಆಕಾರಗಳಿದ್ದು ಒಂದು ಆಕಾರದಿಂದ ಮತ್ತೊಂದಕ್ಕೆ ಸಹಜವಾಗಿ ದೃಷ್ಟಿ ಹರಿಯುತ್ತದೆ. ಅಂತೆಯೆ ಆಕಾರಗಳ ಮಧ್ಯೆಯೂ ತೆರಪಿನ ಪ್ರದೇಶವಿರುತ್ತದೆ. ಇವುಗಳಿಗೆ ವಿಷಮ ತೆರಪು(Negative space)ಗಳೆಂದು ಕರೆಯುತ್ತಾರೆ. ಈ ವಿಷಮ ತೆರಪುಗಳೂ ತನ್ನದೇ ಆದ ಪರಿಣಾಮವನ್ನು ಮನದ ಮೇಲೆ ಬೀರುತ್ತವೆ. ಮುಂದಿನ ಅಂಶ ಮೈವಳಿಕೆಯದು. ನೈಜ ಶೈಲಿಯ ಚಿತ್ರಗಳಲ್ಲಿ ಆಕಾರಗಳ ಅಥವಾ ವಸ್ತ್ರಾಭರಣ ಇಲ್ಲವೆ ಪ್ರಾಕೃತಿಕ ವಸ್ತುಗಳ ನೈಜತೆಯನ್ನು ತರಲು ಹಚ್ಚುವ ಬಣ್ಣಗಳ ರೀತಿಯನ್ನು ಕೌಶಲ್ಯವೆಂದು ಹೇಳಬಹುದು. ಅದೇ ನಿಶ್ಚಿತ ಆಕಾರ ರಹಿತ ನವ್ಯ ಚಿತ್ರಗಳಲ್ಲಿ ವರ್ಣಗಳನ್ನು ಪದರ ಪದರವಾಗಿ ಹಚ್ಚುವ ಅಥವಾ ನಿರ್ವಹಿಸುವ ರೀತಿಯನ್ನು ಜಲ, ತೈಲ ಅಥವಾ ಆಕ್ರಿಲಿಕ್ ಬಣ್ಣಗಳ ಎಲ್ಲ ಸಾಧ್ಯಾಸಾಧ್ಯತೆಗಳನ್ನು ಸಂಶೋಧಿಸುವ ರೀತಿ ಎಂದೂ ಹೇಳಬಹುದು. ಹೀಗೆ ಕಲಾವಿದ ಒಂದೊಂದೇ ಆಕಾರಗಳನ್ನು ಫಲಕದ ಮೇಲೆ ಪೂರೈಸುತ್ತಾ ಹೋದಾಗ ತನ್ನಷ್ಟಕ್ಕೆ ಅವು ಪರಿಪೂರ್ಣವಾಗುವುದಲ್ಲದೆ ಇಂತಹ ಹಲವಾರು ಆಕಾರಗಳಿಂದ ಕೂಡಿದ ಚಿತ್ರಕೃತಿಯೂ ಪರಿಪೂರ್ಣವಾಗಿ ಸಂಯೋಜಿತ ಗೊಂಡಿರುತ್ತವೆ. ಎಂದರೆ ಕೃತಿಯಲ್ಲಿರುವ ಹಲವಾರು ಆಕಾರಗಳು ನಮ್ಮ ಮನದ ಮೇಲೆ ವಿಭಿನ್ನ ಪರಿಣಾಮ ಬೀರುವುದಲ್ಲದೆ ಇಡೀ ಕಲಾಕೃತಿಯ ಒಟ್ಟಂದವೂ ತನ್ನ ಪರಿಣಾಮವನ್ನು ಬೀರುತ್ತದೆ.

ಶಿಲ್ಪಕಲೆ

ಶಿಲ್ಪಕ್ಕೆ ಮೊದಲಿನಿಂದಲೂ ಕಲ್ಲು, ಮರ, ಲೋಹಗಳು ಅಧಿಕವಾಗಿ ಬಳಕೆಯಾಗಿವೆ. ಇವುಗಳಲ್ಲೂ ಫಲಕದ ಮೇಲೆ ಸ್ವಲ್ಪ ಉಬ್ಬಿದ ಅಥವಾ ಹೆಚ್ಚು ಉಬ್ಬಿದ ಇಲ್ಲವೆ ಪೂರ್ಣವಾಗಿ ಎಲ್ಲ ಬದಿಯಿಂದ ನೋಡುವಂತೆ ಬಿಡಿಯಾದ ಶಿಲ್ಪರಚನೆಗಳನ್ನು ಕಾಣಬಹುದು. ಸಾಮಾನ್ಯವಾಗಿ ಬಿಡಿ ಶಿಲ್ಪಗಳು ಪ್ರತ್ಯೇಕವಾಗಿ ಇರಿಸಿದರೂ ಕೆಲವೊಮ್ಮೆ

ಹಲವಾರು ಶಿಲ್ಪಗಳನ್ನು ಸೇರಿಸಿ ಸಂಯೋಜಿಸಿರುವುದುಂಟು. ಪುರಾತನ ಗ್ರೀಕ್ ದೇಶದಲ್ಲಿ ನೈಜ ಮಾನವಾಕೃತಿಗೆ ತೀರ ಹತ್ತಿರವಾದಂತೆ ಆಟ-ಓಟ ಇತ್ಯಾದಿ ಕ್ರೀಡೆಗಳಲ್ಲಿ ನಿರತರಾದಂತಹ ಅನೇಕ ಶಿಲ್ಪಗಳು ರಚಿತವಾದವು. ಈ ಪದ್ಧತಿ ಐರೋಪ್ಯ ದೇಶಗಳಲ್ಲಿ ಕಳೆದ ಶತಮಾನದವರೆಗೂ ಮುಂದುವರೆಯಿತು. ಭಾರತದಲ್ಲಿ ಮೊದಲಿನಿಂದಲೂ ವಿಗ್ರಹಗಳು ಪೂಜೆಗೆಂದೇ ನಿರ್ಮಿತವಾದವು. ಈಚಿನ ವರ್ಷಗಳಲ್ಲಿ ಅದರಿಂದ ಭಿನ್ನವಾದ ಆಶಯಗಳಿಂದಲೂ ಶಿಲ್ಪ ರಚನೆಯಾಗುತ್ತಿದೆ.

ಕಲ್ಲು, ಮರಗಳನ್ನು ಕೆತ್ತಿ ತೆಗೆಯುವುದರಿಂದ, ಮಣ್ಣು-ಗಾರೆ ಇತ್ಯಾದಿಗಳನ್ನು ಮೆತ್ತಿ ರೂಪಿಸುವುದರಿಂದ, ಲೋಹವನ್ನು ಎರಕ ಹೊಯ್ಯುವುದರಿಂದ ಹಾಗೂ ಹಲವಾರು ವಸ್ತುಗಳನ್ನು ಬೆಸುಗೆ ಹಾಕಿ ಇತ್ಯಾದಿ ವಿಧಾನಗಳಿಂದ ಶಿಲ್ಪ ರಚನೆ ಸಾಧ್ಯ. ಈಚೆಗೆ ಫೈಬರ್ ಗ್ಲಾಸ್ ಮಾಧ್ಯಮದಲ್ಲಿ ಶಿಲ್ಪ ರೂಪಿಸುವುದು ಅಧಿಕವಾಗಿದೆ.

ಸಾಮಾನ್ಯವಾಗಿ ಶಿಲ್ಪ ಐತಿಹಾಸಿಕ ದಾಖಲೆಯಾಗಿ ಉಳಿಯುವುದುಂಟು. ರಾಜ ಮಹಾರಾಜರ, ಪುಣ್ಯ ಪುರುಷರ, ಆಧುನಿಕ ರಾಜಕಾರಣಿ, ಸಾಹಿತಿ-ಕಲಾವಿದರ ಶಿಲ್ಪಗಳು ಆಯಾ ವ್ಯಕ್ತಿಗಳು ಹಲವು ಕಾಲ ನೆನಪಿನಲ್ಲಿ ಉಳಿಯುವಂತೆ ಮಾಡುತ್ತದೆ. ಇದಲ್ಲದೆ ಶಿಲ್ಪ ರಚನೆಯಲ್ಲಿ ಪೂಜೆಯ ನಂತರದ ಸ್ಥಾನ ಅಲಂಕರಣಕ್ಕೆ. ಇಲ್ಲಿಯೂ ನೈಜ ಆಕೃತಿಯಿಂದ ತೀರ ಅಮೂರ್ತ ಆಕಾರಗಳವರೆಗೂ ಹಂತಹಂತವಾಗಿ ಶಿಲ್ಪಕಲೆ ಬೆಳೆದುಬಂದಿದೆ. ಕೇವಲ ಆಕಾರಗಳ ಕೊಂಕು-ಬಾಗುವಿಕೆ ಅಥವಾ ನಿಲುವುಗಳೇ ಹಲವಾರು ಭಾವನೆಗಳನ್ನು ನೋಡುಗನಲ್ಲಿ ಮೂಡಿಸಬಹುದು. ಗಾರೆಯ ಶಿಲ್ಪಗಳ ವಿನಾ (ಕೆಲವೊಮ್ಮೆ ಮರದ ಶಿಲ್ಪವೂ ಸೇರಿದಂತೆ) ಶಿಲ್ಪಗಳಿಗೆ ಬಣ್ಣ ಹಾಕುವುದು ಕಂಡುಬರುವುದಿಲ್ಲ. ಸೂಕ್ತ ಸ್ಥಳದಲ್ಲಿ ಇರಿಸಿದ ಶಿಲ್ಪಗಳ ಮೇಲೆ ಬೀಳುವ ನೆರಳು ಬೆಳಕುಗಳೇ ಪರಿಣಾಮಕಾರಿಯಾಗಿರುತ್ತದೆ. ಈಚೆಗೆ ಹಲವಾರು ಸಿದ್ಧವಸ್ತುಗಳನ್ನು ಜೋಡಿಸಿ ಪ್ರತಿಷ್ಠಾಪನಾ ಶಿಲ್ಪ(instalation)ಗಳು ಪ್ರದರ್ಶನದಲ್ಲಿ ಇರಿಸುವುದುಂಟು.

ಇಷ್ಟೆಲ್ಲ ಪರಿಶೀಲಿಸಿದ ಮೇಲೂ ಕೃತಿಯಲ್ಲಿಯ ನಿಜಾಂಶಗಳು ಮತ್ತು ಕ್ರಿಯೆಗಳು (facts and functions) ಒಬ್ಬೊಬ್ಬರಿಗೆ ಒಂದೊಂದು ರೀತಿ ಕಂಡು ಬರಬಹುದು. ಇಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಕಲೆಯನ್ನು ಬಲ್ಲಂತಹ ಹೆಚ್ಚು ಜನರಿಗೆ ಒಪ್ಪಿತವಾಗುವ ಅಂಶಗಳೇ ಮುಖ್ಯವಾಗುತ್ತವೆ. ಹೀಗೆ ನಿರಂತರವಾಗಿ, ಹೆಚ್ಚು ಹೆಚ್ಚಾಗಿ ನಾವು ಸದಭಿರುಚಿಯ ಕಲಾಕೃತಿಗಳನ್ನು ನೋಡುತ್ತ ಹೋದಾಗ, ಆ ಅಭ್ಯಾಸಗಳನ್ನು ಬೆಳಿಸಿಕೊಂಡಾಗ ಕ್ರಮೇಣ ನಮಗೆ ಯಾವುದು ಉತ್ತಮ ಕಲಾಕೃತಿ? ಯಾವುದು ಅಲ್ಲ ಎನ್ನುವುದು ಸುಲಭವಾಗಿ ತಿಳಿಯುತ್ತದೆ. ಅದರೊಂದಿಗೆ ಆ ಕೃತಿಯಲ್ಲಿರುವ ಕಲಾತ್ಮಕ ಅಂಶಗಳು, ಅರ್ಥಗಳು, ಅದರ ಆಶಯಗಳು, ಅನುಭವಗಳು ನಮಗೆ ಹತ್ತಿರವಾಗುತ್ತವೆ.

ಅಂದರೆ ಕಲಾಕೃತಿಗಳ ಗುಣಗ್ರಹಣಕ್ಕೆ ನೋಡುಗನ ಸಿದ್ಧತೆ, ಪರಿಶ್ರಮಗಳೂ ಅಗತ್ಯ. ಈ ದಿಸೆಯಲ್ಲಿ ಪ್ರಯತ್ನಿಸಿದಾಗ ಕೊನೆಗೆ ನಮ್ಮ ಉಸಿರಾಟದಷ್ಟೇ ಸಹಜವಾಗಿ ಕಲಾಕೃತಿಗಳ ಗುಣಗ್ರಹಣ ಸುಲಭವಾಗುತ್ತದೆ. ತನ್ಮೂಲಕ ಕಲಾತ್ಮಕ ಆನಂದ, ರಸಾನುಭವಗಳ ಪ್ರಾಪ್ತಿಯೂ ಆಗುತ್ತದೆ.

ಇಂದು ಕಲೆ ಹಾಗೂ ಜನಸಾಮಾನ್ಯರ ನಡುವೆ ಭಾರೀ ಅಂತರವಿದೆ. ಇಂದಿನ ಸಮಕಾಲೀನ ಕಲೆಯು ಜನಸಾಮಾನ್ಯರಿಗೆ ಅರ್ಥವಾಗದಿರುವುದೇ ಇದಕ್ಕೆ ಕಾರಣ ಎಂದು ಹಲವರ ಅಭಿಪ್ರಾಯ. ದೃಶ್ಯ ಕಲೆಗಳನ್ನು ಆಸ್ವಾದಿಸುವ ದೃಷ್ಟಿಯಿಂದ ನಮ್ಮ ಸಾಮಾನ್ಯ ಶಿಕ್ಷಣದಲ್ಲೂ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ. ಅಂತೆಯೇ ಈ ಕೊರತೆಗಳನ್ನು ಸ್ವಲ್ಪವಾದರೂ ತುಂಬುವುದು ಈ ಜನಪ್ರಿಯ ಕಲಾಮಾಲಿಕೆಯ ಆಶಯ. ಹೀಗೆ ಸಾಮಾನ್ಯರಿಗೆ ದೃಶ್ಯಕಲೆಗಳ ಪ್ರಾಥಮಿಕ ಜ್ಞಾನ ಒದಗಿಸುವ ದೃಷ್ಟಿಯಿಂದಲೇ ಇದನ್ನು ರೂಪಿಸಲಾಗಿದೆ. ಇದರಲ್ಲಿ ದೃಶ್ಯಕಲೆಯ ತಾತ್ವಿಕ ಅಂಶಗಳು, ಮಾಧ್ಯಮಗಳು, ತಂತ್ರಗಳು, ಇತಿಹಾಸ, ಆಧುನಿಕ ಕಲಾ ಪಂಥಗಳು ಇತ್ಯಾದಿ ಹಲವು ವಿಷಯಗಳನ್ನು ಕುರಿತಂತಹ ಹೊತ್ತಿಗೆಗಳನ್ನು ತರುತ್ತಿದ್ದೇವೆ. ತನ್ಮೂಲಕ ದೃಶ್ಯಕಲೆಯನ್ನು ಆಸ್ವಾದಿಸುವ ದಿಸೆಯಲ್ಲಿ ಹೆಚ್ಚಿನ ಜನರು ತೊಡಗುತ್ತಾರೆಂಬ ಮಹತ್ವಾಕಾಂಕ್ಷೆ ಈ ಮಾಲಿಕೆಯದು. ಹೀಗೆ ಜನರನ್ನು 'ಸಹೃದಯ' ರನ್ನಾಗಿಸುವ ದಿಸೆಯಲ್ಲಿ ಇದೊಂದು ಪುಟ್ಟ ಪ್ರಯತ್ನ.

ಚಿ. ಸು. ಕೃಷ್ಣ ಸೆಟ್ಟಿ
ಸಂಪಾದಕರು